بِسۡمِ اللہِ الرَّحۡمٰنِ الرَّحِیۡمِ     نَحۡمَدُہٗ وَنُصَلِّی عَلٰی رَسُوۡلِہِ الۡکَرِیۡمِ     وَعَلٰی عَبۡدِہِ الۡمَسِیۡحِ الۡمَوۡعُوۡد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ವರ್ಷ: 01

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 11

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

26 ಮಾರ್ಚ್ 2020, 26 ಅಮಾನ್ 1399 ಹಿಜರಿ ಶಮ್‌ಸಿ,
01 ಶಬಾನ್ 1441 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَیِّدۡ اِمَامَنَا بِرُوۡحِ الۡقُدُسِ
وَبَارِکۡ لَنَا فِیۡ عُمُرِہٖ وَاَمۡرِہٖ۔

## ಅಲ್ಲಾಹನ ಉಪದೇಶ

كُلُّ نَفۡسٍ ذَآئِقَةُ الۡمَوۡتِ ؕ وَاِنَّمَا تُوَفَّوۡنَ
اُجُوۡرَكُمۡ يَوۡمَ الۡقِيٰمَةِ ؕ فَمَنۡ زُحۡزِحَ
عَنِ النَّارِ وَاُدۡخِلَ الۡجَـنَّةَ فَقَدۡ فَازَ ؕ
وَمَا الۡحَيٰوةُ الدُّنۡيَاۤ اِلَّا مَتَاعُ الۡغُرُوۡرِ ○

*(ಆಲಿ ಇಮ್ರಾನ್ 186)*

ಅಂದರೆ: ಪ್ರತಿಯೊಂದು ಜೀವಿಯೂ ಮರಣದ ರುಚಿ ನೋಡಬೇಕಾಗಿದೆ. ಪುನರುತ್ಥಾನ ದಿನದಂದೇ ನಿಮ್ಮ ಪ್ರತಿಫಲ ನಿಮಗೆ ಪೂರ್ಣವಾಗಿ ನೀಡಲ್ಪಡುವುದು. ಆಗ ಯಾವೊಬ್ಬನು ನರಕಾಗ್ನಿಯಿಂದ ದೂರ ಮಾಡಲ್ಪಟ್ಟು ಸ್ವರ್ಗದಲ್ಲಿ ಪ್ರವೇಶಿಸಲ್ಪಡುತ್ತಾನೋ, ಅವನು ದಿಟವಾಗಿಯೂ ಯಶಸ್ಸನ್ನು ಸಾಧಿಸಿದನು.ಇಹಲೋಕ ಜೀವನ ಭ್ರಮಾತ್ಮಕ ಸಾಧನವಾಗಿದೆ.

**ಇಸ್ಲಾಮಿನ ಆತ್ಮವು ಎಷ್ಟೊಂದು ಶಕ್ತಿಯುತವಾಗಿದೆ ಎಂದರೆ ಅನ್ಯ ಸಮುದಾಯದವರನ್ನು ಇಸ್ಲಾಮಿನಲ್ಲಿ ಪ್ರವೇಶಿಸಲು ವಿವಶರನ್ನಾಗಿ ಮಾಡುತ್ತದೆ. ದೊಡ್ಡ ದೊಡ್ಡ ಬ್ರಿಟಿಷ್ ವಿದ್ವಾಂಸರು ಈ ವಿಷಯವನ್ನು ಒಪ್ಪಿಕೊಳ್ಳುತ್ತಾರೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಅಲ್ಲಾಹನಿಂದ ಸುಧಾರಣೆ ಬಯಸುವುದು ಮತ್ತು ತನ್ನ ಶಕ್ತಿಯನ್ನು ಖರ್ಚು ಮಾಡುವುದು ವಿಶ್ವಾಸದ ರೀತಿಯಾಗಿದೆ. ಹದೀಸಿನಲ್ಲಿ ಹೀಗೆ ಬರುತ್ತದೆ: ಯಾರು ಭರವಸೆದೊಂದಿಗೆ ತನ್ನ ಕೈಗಳನ್ನು ಪ್ರಾರ್ಥನೆಗಾಗಿ ಎತ್ತುತ್ತಾನೋ ಅವನ ಪ್ರಾರ್ಥನೆ ರದ್ದುಗೊಳಿಸುವುದಿಲ್ಲ. ಆದುದರಿಂದ ನಿಷ್ಠೆ ಹಾಗೂ ಭರವಸೆದೊಂದಿಗೆ ಅಲ್ಲಾಹನಂದ ಬೇಡಿಕೊಳ್ಳಿರಿ. ಮತ್ತೊಮ್ಮೆ ನನ್ನ ಇದೇ ಉಪದೇಶವಾಗಿದೆ ಒಳ್ಳೆಯ ನಡತೆ ತೋರಿಸುವುದು ಪವಾಡ ತೋರಿಸಿದಂತೆಯೇ ಆಗಿದೆ. ಯಾವೊಬ್ಬ ವ್ಯಕ್ತಿ ತಾನು ಪವಾಡ ಪುರುಷನಾಗಲು ಬಯಸುವುದಿಲ್ಲವೆಂದಾದರೆ, ನೆನಪಿರಲಿ ಶೈತಾನನು ಅವನನ್ನು ವಂಚಿಸುತ್ತಾನೆ. ಪವಾಡ ಎಂದರೆ ಅಧ್ಭುತ ಅಥವಾ ಚಮತ್ಕಾರ ಎಂದಲ್ಲ. ಪವಾಡದಿಂದ ಇಸ್ಲಾಮಿನ ಸತ್ಯ ಹಾಗೂ ವಾಸ್ತವ ತಿಳಿಯುವುದಾಗಿದೆ. ಆ ಮೂಲಕ ಸನ್ಮಾರ್ಗ ಲಭಿಸುತ್ತದೆ. ನಾನು ಮತ್ತೊಮ್ಮೆ ನಿಮಗೆ ತಿಳಿಯ ಪಡಿಸುತ್ತೇನೆ. ಅದ್ಭುತ ಹಾಗೂ ಚಮತ್ಕಾರಗಳಿಂದ ಒಳಗೂಡಿದ ಕಾರ್ಯ ಪವಾಡವಲ್ಲ. ಅದು ನೈತಿಕತೆಗೆ ಸೇರುವುದಿಲ್ಲ. ಹಾಗಾಗಿ ಅದು ಶೈತಾನನ ಊಹೆ ಮಾತ್ರವಾಗಿದೆ. ನೋಡಿರಿ!! ಕೊಟ್ಯಾಂತರ ಭೂಮಿಯ ವಿವಿಧ ಸ್ಥಳಗಳಲ್ಲಿ ವಾಸವಾಗಿರುವ ಮುಸ್ಲಿಮರು ಬಲವಂತವಾಗಿ ಖಡ್ಗದ ಬಲದಿಂದ ಬಂದಿರುವರೇ? ಇದು ಸರ್ವಥಾ ತಪ್ಪು ಅಭಿಪ್ರಾಯವಾಗಿದೆ. ಇದು ಇಸ್ಲಾಮಿನ ಪವಾಡಾತ್ಮಕ ಗುಣಗಳು ಅವರನ್ನು ಸೆಳೆದುಕೊಂಡಿದೆ.

ಪವಾಡಗಳು ವಿವಿಧ ರೀತಿಯದ್ದಾಗಿರುತ್ತವೆ. ನೀತಿವಂತಿಕೆಯು ಪವಾಡಗಳಲ್ಲೊಂದಾಗಿದೆ. ಅದು ಎಲ್ಲಾ ಕ್ಷೇತ್ರಗಳಲ್ಲೂ ಯಶಸ್ಸನ್ನು ಕಾಣುತ್ತದೆ. ಮುಸ್ಲಿಮರಾದವರು ಕೇವಲ ಸಜ್ಜನರ ಪವಾಡವನ್ನೇ ಕಂಡಿರುತ್ತಾರೆ. ಅವರ ಪರಿಣಾಮ ಬೀರುತ್ತದೆ. ಅವರು ಇಸ್ಲಾಮಿನ ಘನತೆ ಗೌರವವನ್ನು ಕಂಡಿದ್ದಾರೆಯೇ ಹೊರತು ಖಡ್ಗವನ್ನಲ್ಲ. ದೊಡ್ಡ ದೊಡ್ಡ ಬ್ರಿಟಿಷ್ ವಿದ್ವಾಂಸರು ಈ ಮಾತನ್ನು ಒಪ್ಪಿಕೊಳ್ಳುತ್ತಾರೆ. ಇಸ್ಲಾಮಿನ ಆತ್ಮವು ಎಷ್ಟೊಂದು ಶಕ್ತಿಯುತವಾಗಿದೆ ಎಂದರೆ ಅನ್ಯ ಸಮುದಾಯದವರನ್ನು ಇಸ್ಲಾಮಿನಲ್ಲಿ ಪ್ರವೇಶಿಸಲು ವಿವಶರನ್ನಾಗಿ ಮಾಡುತ್ತದೆ.

**(ಮಲ್‌ಫೂಝಾತ್, ಸಂಪುಟ-1, ಪುಟ-125, ಖಾದಿಯಾನ್ 2018)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಪತ್ನಿ ಸಯ್ಯದಾ ಬೇಗಮ್ ಸಾಹಿಬ ಅವರು ಅವರನ್ನು ಬಹಳ ಗೌರವಿಸುತ್ತಿದ್ದರು. ಪಾಕಿಸ್ತಾನಕ್ಕೆ ಆಗಮಿಸಿ ಅವರು ನಮಾಜ್ ಹಾಗೂ ಪವಿತ್ರ ಖುರ್‌ಆನ್ ಪಠಿಸಲು ಪ್ರಾರಂಭಿಸಿದರು. ಅವರು ಮೊಟ್ಟ ಮೊದಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಗ್ರಂಥ "ಇಸ್ಲಾಮ್ ಧರ್ಮದ ತತ್ವಜ್ಞಾನ"ವನ್ನು ಓದಿದರು. ಪಾಕಿಸ್ತಾನದಲ್ಲಿ ವಾಸವಾಗಿದ್ದರಿಂದ ಉರ್ದು ಹಾಗೂ ಸರಾಯಿಕಿ ಭಾಷೆಯು ಸ್ವಲ್ಪ ಮಟ್ಟಿಗೆ ಮಾತನಾಡುತ್ತಿದ್ದರು. ಅವರಿಗೆ ಎರಡು ಮಕ್ಕಳಿದ್ದರು ಒಬ್ಬ ಪುತ್ರ ಮತ್ತು ಇನ್ನೊಬ್ಬರು ಪುತ್ರಿ. ಅವರಿಬ್ಬರ ವಿವಾಹದ ಸಂದರ್ಭದಲ್ಲಿ ಮಲಕ್ ಸಾಹೆಬರು ಅವರ ಹಿರಿಯ ಪತ್ನಿ ಸಯ್ಯದಹ ಬೇಗಮ್ ಸಾಹಿಬ ಅವರ ತೀರ್ಮಾನಕ್ಕೆ ಬಿಟ್ಟಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ದಯಪಾಲಿಸಲಿ ಮತ್ತು ಅವರ ಪದವಿಗಳನ್ನು ಉನ್ನತಗೊಳಿಸಲಿ. ಆಮೀನ್

ಎರಡನೆಯ ಜನಾಝ ಅಝೀಝುಮ್ ಜಾಹಿದ್ ಫಾರಿಸ್ ಅಹ್ಮದ್ ಎಂಬ ಬಾಲಕನದು. ಅವನು 12ನೇ ವಯಸ್ಸಿನಲ್ಲಿ ಮೃತನಾದನು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ತಂದೆ ತಾರಿಖ್ ನೂರಿ ಮತ್ತು ತಾಯಿ ಅತಿಯ್ಯತುಲ್ ಅಝೀಝ್ ಖದೀಜ. ಅಝೀಝುಮ್ ಜಾಹಿದನ ತಾಯಿಯ ತಂದೆ ಫಾರೂಖ್ ಅಹ್ಮದ್ ಖಾನ್. ಅವರು ಹಝ್ರತ್ ನವಾಬ್ ಅಮತುಲ್ ಹಫೀಝ್ ಬೇಗಮ್ ಸಾಹಿಬರವರ ಮೊಮ್ಮಗನಾಗಿದ್ದರು. ಅವರು ಸಹ ನನಗೆ ಈತನ ಬಗ್ಗೆ ಬರೆದಿದ್ದಾರೆ ಆತನು ಬಹಳ ಉತ್ತಮ ಸ್ವಭಾವ ಹೊಂದಿದ್ದನು, ನಮಾಝುಗಳನ್ನು ಕಡ್ಡಾಯವಾಗಿ ನಿರ್ವಹಿಸುವವನಾಗಿದ್ದನು. ನನಗೂ ಪತ್ರಗಳನ್ನು ಬರೆಯುತ್ತಿದ್ದನು. ತಾನು ಅಹ್ಮದಿ ಆಗಿದ್ದು ಬಹಳ ಗರ್ವದ ವಿಷಯವಾತ್ತು ಸ್ಕೂಲ್‌ನಲ್ಲಿಯು ಬಹಳ ಗರ್ವದಿಂದ ತಾನು ಅಹ್ಮದಿ ಎಂದು ಹೇಳುತ್ತಿದ್ದನು. ಪಾಕಿಸ್ತಾನದಲ್ಲಿ ಹೀಗೆ ತಾನು ಅಹ್ಮದಿ ಎಂದು ಹೇಳುವುದು ಬಹಳ ಧೈರ್ಯದ ವಿಷಯವಾಗಿದೆ. ನನ್ನ ಖುತ್‌ಬಗಳನ್ನು ಬಹಳ ಗಮನದಿಂದ ಆಲಿಸುತ್ತಿದ್ದನು. ವಖ್‌ಫೆ ನೌ ಆಗಿದ್ದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಂಪೂರ್ಣ ಖಸೀದವನ್ನು ಕಂಠಪಾಠ ಮಾಡಿದ್ದನು. ಆಮಾಅತ್ತಿನ ಚಂದಗಳಲ್ಲಿ ಭಾಗವಹಿಸಿದ್ದನು. ನಮಾಝ್ ನಿರ್ವಹಿಸಲು ಕಡ್ಡಾಯವಾಗಿ ನಮಾಝ್ ಸೆಂಟರ್‌ಗೆ ಬರುತ್ತಿದ್ದನು. ಫಜರ್ ನಂತರ ಕಡ್ಡಾಯವಾಗಿ ಪವಿತ್ರ ಖುರ್‌ಆನ್ ಪಠಿಸುತ್ತಿದ್ದನು.

ಏಳನೇಯ ತರಗತಿಯ ವಿದ್ಯಾರ್ಥಿ ಆಗಿದ್ದನು. ಮನೆಯಲ್ಲಿದ್ದ ಜನರೇಟರ್‌ನಲ್ಲಿ ಬೆಂಕಿ ಎದ್ದು ಮನೆಗೆ ಬೆಂಕಿ ಹಿಡಿದಾಗ ಬಾಲಕನಿಗೆ ಬೆಂಕಿ ತಗಲಿ ಗಾಯವಾಯಿತು. ಅವನು ಸುಟ್ಟ ಗಾಯದಿಂದ ಗುಣಮುಖನಾಗುತ್ತಿದ್ದರೂ ರೋಗಾಣು ಸೋಂಕು ವರ್ಧಿಸಿತು. ಅವನು ಆಸ್ಪತ್ರೆಯಲ್ಲಿ ನಿಧನ ಹೊಂದಿದನು. ಈ ಪ್ರಾಯದ ನಿಷ್ಕಳಂಕ ಮಕ್ಕಳು ಸ್ವರ್ಗ ಗಳಿಸುತ್ತಾರೆ. ಅಲ್ಲಾಹನು ತನಗೆ ಪ್ರಿಯರಾದವರ ಸಮೀಪದಲ್ಲಿ ಅವನಗೆ ಸ್ಥಳ ನೀಡಲಿ. ಅವನ ಪದವಿ ವರ್ಧಿಸುತ್ತಿರಲಿ. ಅವನ ತಾಯಿಯು ಅವನಿಗೆ ನೋಡಿಕೊಳ್ಳುತ್ತಿದ್ದರು. ಅವನ ತಂದೆ ಎಂದು ಅವನನ್ನು ನೋಡಲಿಲ್ಲ. ತಾಯಿ ಮತ್ತು ಅಜ್ಜಿ ಅವನಿಗೆ ನೋಡಿಕೊಳ್ಳುತ್ತಿದ್ದರು. ಅಲ್ಲಾಹನು ತಾಯಿ ಹಾಗೂ ಅಜ್ಜ ಅಜ್ಜಿಯರಿಗೂ ಸಹನೆ ಮತ್ತು ಧೈರ್ಯ ದಯಪಾಲಿಸಲಿ – ಆಮೀನ್.

*******************

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

# ಜುಮುಅ ಖುತ್‌ಬ

**ಇಸ್ಲಾಮ್ ಧರ್ಮವೂ ಎಂದಿಗೂ ಸುಳ್ಳು ಹೇಳಲೂ ಅನುಮತಿಸಲಿಲ್ಲ**

**ಏನು ಪ್ರವಾದಿ ಮುಹಮ್ಮದ್(ಸ) ಅವರು ವಿಶೇಶ ಸಂದರ್ಭಗಳಲ್ಲಿ ಸುಳ್ಳು ಹೇಳಲು ಅನುಮತಿಸಿದ್ದಾರೆಯೇ?**

**ಹಝ್ರತ್ ಮಸೀಹ್ ಮೌಊದ್(ಅ) ಅವರ ಉಲ್ಲೇಖಗಳ ಪ್ರಕಾರ ಈ ತಪ್ಪು ತಿಳುವಳಿಕೆಯ ನಿವಾರಣೆ**

**ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ರಝಿಯಲ್ಲಾಹು ಅನ್ಹುರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ವಿದ್ರೋಹ, ಹಿಂಸಾಚಾರ, ಮೊದಲಾದ ದೋಷಾರೋಪಗಳಲ್ಲಿ ಮುಳುಗಿದ್ದ ಯಹೂದಿ ಅಬೂ ರಾಫೆಅ್ ಅವನ ಕುಕೃತ್ಯಗಳ ಕಾರಣದಿಂದ ವಧಾರ್ಹನೆಂದು ಶಿಕ್ಷೆ ವಿಧಿಸಿದ ಪ್ರಸ್ತಾವನೆ**

**ದಿವಂಗತ ಮುಕರ್‍ರಮ್ ಮುಕರ್‍ರಮ್ ತಾಜ್‌ದೀನ್ ಸಾಹಿಬ್ ಅವರ ನಿಧನ ಹಾಗೂ ಉತ್ತಮ ಗುಣಲಕ್ಷಣಗಳ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫತೂಹ್'** ಮಸೀದಿಯಲ್ಲಿ 14–02–2020 ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಕಳೆದ ವಾರದ ಖುತ್‌ಬದಲ್ಲಿ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರ[ರ] ಬಗ್ಗೆ ನಾನು ವಿವರಿಸಿದ್ದೆ. ಅದರ ಸ್ವಲ್ಪ ಭಾಗ ವಿವರಿಸಲು ಬಾಕಿಯಿತ್ತು. ಅದನ್ನು ಇನ್‌ಶಾಅಲ್ಲಾಹ್ ಈಗ ವಿವರಿಸುವೆನು. ಕಅಬ್ ಬಿನ್ ಅಶ್ರಫ್‌ನ ಹತ್ಯೆಗೆ ಸಂಬಂಧಿಸಿ, ಹಝ್ರತ್ ಮುಹಮ್ಮದ್ ಬಿನ್ ಮಸ್ಲಿಮರು ಕಅಬನನ್ನು ಉಪಾಯದಿಂದ ಮನೆಯಿಂದ ದೂರ ಕರೆದುಕೊಂಡು ಹೋಗಿ ಹತ್ಯೆ ಮಾಡಿದ್ದರು ಎಂದು ವಿವರಿಸಲಾಗಿತ್ತು. ಅದು ಸುಳ್ಳು ಹೇಳಿ ನಡೆಸಿದ ಹತ್ಯೆಯಲ್ಲವೆ ಎಂಬ ಪ್ರಶ್ನೆ ಬಗ್ಗೆ ವಿವರಿಸಲಾಗಿತ್ತು. ಕೆಲವು ಮತಪಂಡಿತರು ಹೇಳುತ್ತಾರೆ ಒಂದು ಹದೀಸು ಮೂರು ಸಂದರ್ಭಗಳಲ್ಲಿ ಸುಳ್ಳು ಹೇಳುವುದಕ್ಕೆ ಅನುಮತಿ ನೀಡುತ್ತದೆ ಎಂದು. ಆದರೆ ಇದು ತಪ್ಪು ಅಭಿಪ್ರಾಯವಾಗಿದೆ ಅಥವಾ ಹದೀಸಿನ ತಪ್ಪು ವ್ಯಾಖ್ಯಾನವಾಗಿದೆ. ನಾನು ಆ ಸಂದರ್ಭದಲ್ಲಿ ಸೀರತ್ ಖಾತಮನ್ನಬೀಯೀನ್‌ನಿಂದ ವಿವರಿಸಿದೆ. ಆದರೆ ಈ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮ ಒಂದು ಗ್ರಂಥ **'ನೂರೆ ಘುರ್‌ಖಾನ್'**ನಲ್ಲಿ ಸ್ಪಷ್ಟಪಡಿಸಿದ್ದನ್ನು ನಾನು ಇಲ್ಲಿ ಬೆಳಕು ಚೆಲ್ಲುತ್ತೇನೆ. ಅದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಧರ್ಮವನ್ನು ಮರೆಮಾಡಲು ಮತ್ತು ಸುಳ್ಳು ಹೇಳಲು ಅನುಮತಿಸಿದ್ದಾರೆ ಎಂದು ಒಬ್ಬ ಕ್ರೈಸ್ತನು ಮಾಡಿದ ಆಕ್ಷೇಪಕ್ಕೆ ಈ ರೀತಿ ಉತ್ತರ ನೀಡಿದ್ದರು:

ಸ್ಪಷ್ಟವಾಗಿ ತಿಳಿದುಕೊಳ್ಳಿರಿ. ಪವಿತ್ರ ಖುರ್‌ಆನ್‌ನಲ್ಲಿ ಸತ್ಯ ಹೇಳುವುದರ ಬಗ್ಗೆ ಎಷ್ಟು ಒತ್ತಿ ಹೇಳಲಾಗಿದೆ ಎಂದರೆ ಅಂತಹ ಉಪದೇಶಗಳ ನೂರರಲ್ಲಿ ಒಂದು ಪಾಲಿನಷ್ಟಾದರೂ ಉಪದೇಶ ಸುವಾರ್ತೆಗಳಲ್ಲಿ ಇದೆ ಎಂದು ನಾನು ಖಂಡಿತವಾಗಿ ಹೇಳಲಾರೆ. ಪವಿತ್ರ ಖುರ್‌ಆನ್ ಸುಳ್ಳು ಹೇಳುವುದು ವಿಗ್ರಹಾರಾಧನೆಗೆ ಸಮಾನವೆಂದು ಹೇಳಿದೆ. ಅಲ್ಲಾಹನು ಹೇಳಿದ್ದಾನೆ: – **ಫಜ್‌ತನಿಬುರ್ರಿಜ್‌ಸ ಮಿನಲ್ ಅವ್‌ಸಾನ ವಜ್ತನಬೂ ಖೌಲಝ್ಝೂರ್** – ವಿಗ್ರಹಾರಾಧನೆಯ ಕೆಡುಕಿನಿಂದ ನೀವು ದೂರವಿರಿ. ಸುಳ್ಳು ಹೇಳುವುದರಿಂದಲೂ ದೂರವಿದ್ದುಕೊಳ್ಳಿರಿ. (22:31). ಇನ್ನೊಂದು ಸ್ಥಳದಲ್ಲಿ ಅಲ್ಲಾಹನು ಹೇಳುತ್ತಾನೆ:– **ಯಾ ಅಯ್ಯುಹಲ್ಲಧೀನ ಆಮನೂ ಕೂನೂ ಖವ್ವಾಮೀನ ಬಿಲ್ ಖಿಸ್ತಿ ಶುಹದಾಅ ಲಿಲ್ಲಾಹಿ ವಲವ್ ಅಲಾ ಅನ್‌ಘುಸಿಕುಮ್ ಅವಿಲ್‌ವಾಲಿದೈನ ವಲ್ ಅಖ್‌ರಬೀನ್**

ಅಂದರೆ ಓ ಸತ್ಯವಿಶ್ವಾಸಿಗಳೇ, ನ್ಯಾಯ ಮತ್ತು ಸತ್ಯದ ಮೇಲೆ ನೆಲೆನಿಲ್ಲಿರಿ. ಅಲ್ಲಾಹನಗೋಸ್ಕರ ಸತ್ಯವಾದ ಸಾಕ್ಷ್ಯ ನೀಡಿರಿ. ಆ ಸಾಕ್ಷ್ಯ ನಿಮಗೆ ಹಾನಿಕರವಾದರೂ ನಿಮ್ಮ ತಂದೆ ತಾಯಂದಿರಿಗೂ ಸಂಬಂಧಿಕರಿಗೂ ಹಾನಿಕರವಾಗಿದ್ದರೂ ಸಹ. (4:136). ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ದೇವ ಭಯವಿಲ್ಲದ ಆಕ್ಷೇಪಗಾರನೇ, ನೀವು ನಿಮ್ಮ ಸುವಾರ್ತೆ ಗ್ರಂಥ ತೆರೆದು ನಮಗೆ ತೋರಿಸಿರಿ. ಸತ್ಯ ಹೇಳುವ ಬಗ್ಗೆ ಇಷ್ಟು ಒತ್ತಿ ಹೇಳಿದ ಉಪದೇಶ ಸುವಾರ್ತೆಗಳಲ್ಲಿ ಎಲ್ಲಿದೆ?

ಫತ್‌ಹ್ ಮಸೀಹ್ ಎಂಬ ಹೆಸರಿನ ಆ ಕ್ರೈಸ್ತನನ್ನು ಸಂಬೋಧಿಸಿ ಹೇಳಿದರು: ನೀವು ಬರೆದಿದ್ದೀರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೂರು ಸಂದರ್ಭಗಳಲ್ಲಿ ಸುಳ್ಳು ಹೇಳಲು ಅನುಮತಿ ನೀಡಿದ್ದಾರೆಂದು. ಆದರೆ ಅದು ತಮ್ಮ ಅಜ್ಞಾನದ ಕಾರಣದಿಂದ ಉಂಟಾದ ತಪ್ಪು ಗ್ರಹಿಕೆಯಾಗಿದೆ. ವಾಸ್ತವಿಕ ವಿಷಯವೇನೆಂದರೆ ಯಾವ ಹದೀಸಿನಲ್ಲಿಯೂ ಸುಳ್ಳು ಹೇಳಬಹುದು ಎಂಬ ಅನುಮತಿ ಖಂಡಿತವಾಗಿಯೂ ಇಲ್ಲ. ಬದಲಾಗಿ ಹದೀಸಿನಲ್ಲಿ ಹೀಗೆ ಹೇಳಲಾಗಿದೆ: **ಇನ್ ಖುತಿಲ್ತ ವ ಉಹ್‌ರಿಖ್ತ** – ನೀನು ಕೊಲ್ಲಲ್ಪಡುವೆಯಾದರೂ ಸುಟ್ಟು ಹಾಕಲ್ಪಡುವೆಯಾದರೂ ಸತ್ಯವನ್ನೇ ಹೇಳು. ಯಾವುದಾದರೂ ಒಂದು ಹದೀಸು ಪವಿತ್ರ ಖುರ್‌ಆನ್ ಮತ್ತು ಸಹೀಹ್ ಹದೀಸ್‌ಗಳಿಗೆ ವಿರುದ್ಧವಾಗಿದೆ ಎಂದು ಕಲ್ಪಿಸಬಹುದಾಗಿದ್ದರೆ ಆ ಹದೀಸು ಸ್ವೀಕರಿಸಲು ಅರ್ಹವಾಗುವುದಿಲ್ಲ. ಏಕೆಂದರೆ ಪವಿತ್ರ ಖುರ್‌ಆನ್ ಮತ್ತು ಸಹೀಹ್ ಹದೀಸುಗಳಿಗೆ ವಿರುದ್ಧವಾಗಿಲ್ಲದ ಹದೀಸುಗಳನ್ನು ಮಾತ್ರ ನಾವು ಅಂಗೀಕರಿಸುತ್ತೇವೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹೌದು ಕೆಲವು ಹದೀಸ್‌ಗಳಲ್ಲಿ ತವ್‌ರಿಯವನ್ನು (ದ್ವಿಯಾರ್ಥಕ ಮಾತು) ಸಾಂದರ್ಭಿಕವಾಗಿ ಹೇಳುವ ಸಾಂಕೇತ ಸಿಗುತ್ತದೆ ಎಂದರೆ ಸಾಂದರ್ಭಿಕವಾಗಿ ದ್ವಿಯಾರ್ಥಕ ಮಾತುಗಳನ್ನು ಉಪಯೋಗಿಸುವುದು. ಅಂತಹ ಮಾತುಗಳನ್ನು ದ್ವೇಶ ಹರಡಿಸಲು ಸುಳ್ಳು ಎಂಬ ಹೆಸರು ನೀಡಲಾಗಿದೆ. ಹೀಗೆ ದ್ವಯಾರ್ಥಕ ಮಾತುಗಳನ್ನು ಉಪಯೋಗಿಸಿದಾಗ ವಿರೋಧಿಗಳು ಅದರ ವಿರುದ್ಧ ದ್ವೇಷವನ್ನು ಹರಡಿಸಲು ಸುಳ್ಳು ಎಂದು ಹೇಳುತ್ತಾರೆ. ಓರ್ವ ಮೂರ್ಖ ಇಂತಹ ಪದಗಳನ್ನು ಹದೀಸ್‌ಗಳಲ್ಲಿ ದ್ವಂದ್ವಾರ್ಥಕವಾಗಿ ಉಪಯೋಗಿಸಿರುವುದನ್ನು ಕಂಡರೆ ಅದನ್ನು ಸುಳ್ಳು ಎಂದು ಭಾವಿಸುತ್ತಾನೆ. ಇದು ಕೇವಲ ಒಂದು ಕಠಿಣವಾದ ವಿಷಯವನ್ನು ಬಿಡಿಸಿ ಹೇಳುವ ವಿಧಾನವಾಗಿದೆ. ವಾಸ್ತವದಲ್ಲಿ ಸುಳ್ಳು ಎಂಬುದು ಇಸ್ಲಾಮ್‌ನಲ್ಲಿ ಕೊಳಕು, ನಿಷಿದ್ಧ ಮತ್ತು ಶಿರ್ಕ್ (ಬಹುದೇವಾರಾಧನೆ)ಗೆ ಸಮಾನವಾಗಿದೆ ಎಂದು ತಿಳಿದಿಲ್ಲ. ಆದರೆ ತವ್‌ರಿಯದ (ದ್ವಯಾರ್ಥಕ ಮಾತು) ನಿಜವಂಶ ಸುಳ್ಳು ಎಂಬುದಲ್ಲ. ಬದಲಿಗೆ ದ್ವಂದ್ವಾರ್ಥಕವಾಗಿ ಜನಸಾಮಾನ್ಯರಿಗೆ ಗಾಬರಿಯ ಸಂದರ್ಭದಲ್ಲಿ ಅನುಮತಿಸಿರುವುದನ್ನು ಹದೀಸುಗಳಲ್ಲಿ ಕಾಣಬಹುದಾಗಿದೆ. ಆದರೆ ಹೀಗೆ ಸಹ ಬರೆಯಲಾಗಿದೆ, ತವ್‌ರಿಯವನ್ನು ಸಹ ವರ್ಜಿಸುವವರು

ಉನ್ನತಮಟ್ಟದ ತಖ್ವ ಹೊಂದುವರು. ಸತ್ಯ ಹೇಳುವುದರಿಂದ ಕೊಲ್ಲಲ್ಪಡಲು ಅಥವಾ ಸುಟ್ಟು ಹಾಕಲ್ಪಡಲು ಸಾಧ್ಯತೆ ಇರುವಾಗಲೂ ಸತ್ಯ ಹೇಳುವುದೇ ಶ್ರೇಷ್ಠವಾಗಿದೆ. ತವ್‌ರಿಯಾದ ಇಸ್ಲಾಮಿನ ಪಾರಿಭಾಷಿಕ ಅರ್ಥವೇನೆಂದರೆ ಪಿತೂರಿತನದ ಭಯದಿಂದ ಒಂದು ಮಾತನ್ನು ರಹಸ್ಯವಾಗಿಡಲು ಉಪಯೋಗಿಸುವಂತಹ ವಿಧಾನ ಅದರ ಉಪಯೋಗದಿಂದ ಒರ್ವ ಬುದ್ಧಿವಂತನು ತಿಳಿದುಕೊಳ್ಳುವನು. ಅದರೆ ಒರ್ವ ಸಾಮಾನ್ಯ ಬುದ್ಧಿವಂತನು ತಿಳಿಯಲು ಸಾಧ್ಯವಿಲ್ಲ. ಅವನ ಯೋಚನೆಯನ್ನು ಬೇರೆ ಕಡೆ ತಿರುಗಿಸಲು ಉಪಯೋಗಿಸುವಂತಹ ಮಾತಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಲವು ಹದೀಸ್‌ಗಳಲ್ಲಿ ಇಬ್ಬರು ಮುಸ್ಲಿಮರ ನಡುವೆ ಸಂಧಾನ ಮಾಡಿಸಲು ಅಥವಾ ತನ್ನ ಪತ್ನಿಯನ್ನು ಒಂದು ಸಮಸ್ಯೆಯಿಂದ ದೂರವಿಡಲು ಅಥವಾ ಯುದ್ಧದಲ್ಲಿ ಶತ್ರುಗಳ ಗಮನ ಬೇರೆ ಕಡೆ ತಿರುಗಿಸುವುದಕ್ಕಾಗಿ ತವ್‌ರಿಯವನ್ನು ಧರ್ಮಬದ್ಧವಾಗಿಸಿದ್ದಾರೆ. ಆದರೆ ಇನ್ನೂ ಅನೇಕ ಹದೀಸ್‌ಗಳಿವೆ ಅದರಿಂದ ತಿಳಿದು ಬರುವುದೇನಂದರೆ ತವ್‌ರಿಯ ಉತ್ತಮ ಮಟ್ಟದ ತಖ್ವಕ್ಕೆ ವಿರುದ್ಧವಾಗಿದೆ ಸ್ಪಷ್ಟವಾದ ಸತ್ಯವು ಉತ್ತಮವಾಗಿದೆ. ಮತ್ತು ಸತ್ಯ ಹೇಳುವುದರಿಂದ ಕೊಲ್ಲಲ್ಪಡಲು ಅಥವಾ ಸುಟ್ಟು ಹಾಕಲ್ಪಡಲು ಸಾಧ್ಯತೆ ಇರುವಾಗಲೂ ಸತ್ಯ ಹೇಳುವುದೇ ಶ್ರೇಷ್ಠವಾಗಿದೆ.

ಅನಂತರ ಹುಝೂರ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರವಾದಿ ಸಲಲ್ಲಾಹು ಅಲೈಹಿವಸಲ್ಲಮರು ಅದನ್ನು ಆದಷ್ಟು ಉಪಯೋಗಿಸದಿರಲು ಆದೇಶಿಸಿದ್ದಾರೆ ಅಥವಾ ತಮ್ಮ ಮಾತುಗಳಲ್ಲಿ ಬಾಹ್ಯವಾಗಿ ಸುಳ್ಳು ಎಂದು ವ್ಯಕ್ತವಾಗಬಾರದು. ಅವರು ಹೇಳುತ್ತಾರೆ: ಹುಝೂರ್[ಸ] ಉಹುದ್ ಯುದ್ಧದಲ್ಲಿ ಏಕಾಂಗಿಯಾದ ಸ್ಥಿತಿಯಲ್ಲೂ ಖಡ್ಗಗಳ ಆಕ್ರಮಣ ಅವಸ್ಥೆಯಲ್ಲೂ ಹೇಳುತ್ತಾರೆ: ನಾನು ಮುಹಮ್ಮದ್ ಆಗಿದ್ದೇನೆ, ನಾನು ಸಂದೇಶವಾಹಕನಾಗಿದ್ದೇನೆ, ನಾನು ಮುತಲ್ಲಿಬ್‌ನ ಪುತ್ರನಾಗಿದ್ದೇನೆ. ಇಲ್ಲಿ ಒಂದು ಸ್ಪಷ್ಟೀಕರಣ ಹೇಳಬಯಸುತ್ತೇನೆ. ಈ ಗ್ರಂಥ ಪ್ರಕಟಗೊಂಡಿತ್ತು ಅದೇ ಗ್ರಂಥದ ಟಿಪ್ಪಣಿಯಲ್ಲಿ ಹೀಗೆ ಬರೆಯಲಾಗಿದೆ. ಇದು ತಪ್ಪು ಆಗಿರುತ್ತದೆ (by mistake) ಆಗಿರುತ್ತದೆ. ಈ ಘಟನೆ ಹುನೈನ್ ಯುದ್ಧದ್ದಾಗಿದೆ. ಉಹುದ್ ಯುದ್ಧದಲ್ಲಿ ಆದ ಹಾಗೆ ಅದ್ಯಾಗೊ ಸೇರಿದೆ. ಇದೀಗ ನನಗೆ ನಮ್ಮ Research cell ನವರೇ "ಸೀರತುನ್ನಬಿಯ"ದಿಂದ ಒಂದು ಪುರಾವೆ ಒದಗಿಸಿದ್ದಾರೆ ಅದರಲ್ಲಿ ಹೀಗೆ ಬರೆಯಲಾಗಿದೆ– ಈ ಪದಗಳು ಹಝ್ರತ್ ರಸೂಲುಲ್ಲಾಹ್[ಸ] ಹುನೈನ್ ಮತ್ತು ಉಹುದ್ ಎರಡೂ ಯುದ್ಧಗಳಲ್ಲಿಯು ಉಪಯೋಗಿಸಿದ್ದರು ಆದ್ದರಿಂದ ಈಗ ಯಾವ ಪ್ರಕಟಣ ವಿಭಾಗವಿದೇಯೇ ಅವರೂ ಈ ಟಿಪ್ಪಣಿಯನ್ನು ಮುಂದೆ ಭವಿಷ್ಯಕ್ಕಾಗಿ ತೆಗೆದು ಹಾಕಬೇಕಾಗಿದೆ. ಹೆಚ್ಚಿನಾಂಶ ನಾನು ನೋಡಿರುತ್ತೇನೆ ಕೆಲವೊಮ್ಮೆ ಅವಸರದಿಂದಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಬಳಸಿದ ಪದಗಳನ್ನು ಅದರ ಅರ್ಥ ವಿವರಿಸಲು ಅಥವಾ ಸರಳತೆ ತರಲು ಟಿಪ್ಪಣಿಯಲ್ಲಿ ಬರೆಯಲಾಗುತ್ತದೆ. ಇದು ತಪ್ಪಾಗಿದೆಯೋ ಅಥವಾ ಲೋಪದಿದಾಗಿಯೇ ತಿಳಿಯದು. ಅದಾಗ್ಯೂ ಇನ್ನೂ ಸಂಶೋಧನೆ ಮಾಡುವ ಅಗತ್ಯವಿದೆ. ಗಮನವಹಿಸುವ ಅಗತ್ಯವಿದೆ ಆದ್ದರಿಂದ ಅಂತೂ ಈ ಆಧಾರ ನನ್ನ ಬಳಿ ಬಂದಿತ್ತು ಮತ್ತು ಸ್ಪಷ್ಟವಾಗಿ ಬರೆಯಲಾಗಿತ್ತು. ಈ ಪದಗಳು ಹುನೈನ್ ಮತ್ತು ಉಹುದ್ ಎರಡೂ ಸಂದರ್ಭದಲ್ಲಿ ಹಝ್ರತ್ ರಸೂಲುಲ್ಲಾಹ್[ಸ] ಅವರು ಹೇಳಿದ್ದರು. ಅಂತೂ ಈ ಕುರಿತು ಈ ಸ್ಪಷ್ಟನೆ ಆಗಿದೆ.

ಇನ್ನು ಮುಂದೆ ಅವರು ಹೇಳುತ್ತಾರೆ: ಯಾವ ಹದೀಸಿನಲ್ಲಿ ತವ್‌ರಿಯವನ್ನು ಸುಳ್ಳಿನ ಅರ್ಥ ಬರುವಂತೆ ವಿವರಿಸಲಾಗಿದೆ ಆದು ಅತ್ಯಂತ ಅಜ್ಞಾನತೆ ಆಗಿದೆ. ಎಂದರೆ ಪದಗಳನ್ನು ಸರಳಗೊಳಿಸಲು ತಿಳಿಯಾಗಿ ಹೇಳಿಕೊಡಲು ಎಲ್ಲಿಯೂ ಆಗಲಿ ಸುಳ್ಳು ಪದವನ್ನು ಬಳಸಲ್ಪಟ್ಟರೆ ಅದು ಅತ್ಯಂತ ಅಜ್ಞಾನತೆ ಆಗಿದೆ ಎಂದು ಹೇಳಿದರು. ಪವಿತ್ರ ಖುರ್‌ಆನ್ ಹಾಗೂ ಸಹೀಹ್ ಹದೀಸ್‌ಗಳು ಒಮ್ಮತದಿಂದ ಸುಳ್ಳನ್ನು ಅಪ್ಪಟ ನಿಷಿದ್ಧ ಹಾಗೂ ಕೊಳಕು ಎಂದು ವಾದಿಸಿವೆ. ಉನ್ನತ ದರ್ಜೆಯ ಹದೀಸುಗಳು ತವ್‌ರಿಯ ಸಮಸ್ಯೆಯನ್ನು ಸ್ಪಷ್ಟವಾಗಿ ವಿವರಿಸಿವೆ. ಉದಾಹರಣೆಯ ರೂಪದಲ್ಲಿ ಯಾವುದೇ ಒಂದು ಹದೀಸಿನಲ್ಲಿ ತವ್‌ರಿಯ ಜಾದಲ್ಲಿ ಸುಳ್ಳು ಎಂದು ಪದ ಬಂದಿದರೆ ನೌಧುಬಿಲ್ಲಾಹ್ ಅದು ಎಂದೂ ನಿಜವಾದ ಸುಳ್ಳು ಆಗಲು ಹೇಗೆ ಸಾಧ್ಯ ಬದಲಾಗಿ ಅದನ್ನು ಒಪ್ಪಲು ಅತ್ಯಂತ ಭಕ್ತಿಯುಳ್ಳ ಮಾರ್ಗ ಎಂದರೆ ತವ್‌ರಿಯವನ್ನು ಸುಳ್ಳು ಎಂದು ಭಾವಿಸಿ ಬಳಸಿರಬಹುದು. ನಮಗೆ ಪವಿತ್ರ ಖುರ್‌ಅನ್ ಮತ್ತು ಸಹೀಹ್ ಹದೀಸ್‌ಗಳನ್ನು ಅನುಸರಿಸುವುದು ಅನಿವಾರ್ಯವಾಗಿದೆ. ಇದರ ವಿರುದ್ಧವಾಗಿ ನಮ್ಮ ವಿರೋಧಿಗಳು ಅರ್ಥ ಕಲ್ಪನೆ ಕೊಂಡರೆ ಅದನ್ನು ಸ್ವೀಕರಿಸಲು ಸಾಧ್ಯವಿಲ್ಲ.

ಮುಂದುವರಿಯುತ್ತ ಅವರು ಹೇಳುತ್ತಾರೆ: ಪವಿತ್ರ ಖುರ್‌ಆನ್ ಸುಳ್ಳುಗಾರನನ್ನು ಶಪಿಸುತ್ತಾ ಹೇಳುತ್ತದೆ: ಸುಳ್ಳುಗಾರರು ಶೈತಾನನ ಬಂಧುಗಳಾಗಿದ್ದಾರೆ. ಸುಳ್ಳುಗಾರರು ಅವಿಶ್ವಾಸಿಗಳಾಗಿರುತ್ತಾರೆ. ಸುಳ್ಳುಗಾರರ ಮೇಲೆ ಶೈತಾನ್‌ಗಳು ಆವರಿಸಿರುತ್ತಾರೆ. ಕೇವಲ ಸುಳ್ಳು ಹೇಳದಿರಲಷ್ಟು ಹೇಳಳಿಲ್ಲ ಬದಲಾಗಿ ಸುಳ್ಳಗಾರರ ಸಂಗಡವೂ ಇರಬಾರದು ಮತ್ತು ಅವರ ಸಹವಾಸ ಬಿಡಬೇಕು ಎಂದು ಉಪದೇಶಿಸಲಾಗಿದೆ. ಅಲ್ಲಾಹನಿಗೆ ಭಯಪಡಿರಿ ಮತ್ತು ಸತ್ಯವಂತರ ಸಹವಾಸದಲ್ಲಿರಿ ಎಂದು ಹೇಳಲಾಗಿದೆ. ಇನ್ನೊಂದು ಸ್ಥಳದಲ್ಲಿ ಹೀಗೆ ಹೇಳಲಾಗಿದೆ. ನೀನು ಮಾತನಾಡಿದರೆ ಸತ್ಯವಾಗಿಯೇ ಮಾತನಾಡಬೇಕಾಗಿದೆ ತಮಾಷೆಗಾಗಿಯು ಸುಳ್ಳು ಹೇಳಬಾರದು. (ನೂರುಲ್ ಖುರ್‌ಅನ್, ಸಂಖ್ಯೆ:2, ರೂಹಾನಿ ಖಝಾಯೀನ್ ಸಂಪುಟ–9, ಪುಟ–402–408, ಸೀರತುಲ್ ಹಲ್‌ಬಿಯ ಸಂಪುಟ–2, ಪುಟ–310, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಇದು ಈ ಹಿಂದೆ ಹೇಳಿದ ವಿಷಯಗಳ ವಿವರದಲ್ಲಿ ಸ್ಪಷ್ಟಪಡಿಸಿದಾಗಿದೆ. ಈಗ ನಾನು ಹಝ್ರತ್ ಮುಹಮ್ಮದ್ ಬಿನ್ ಮಸ್ಲಿಮರ ಜೀವಿತದ ಬಗ್ಗೆ ವಿವರಣೆ ಮುಂದುವರಿಸುತ್ತೇನೆ. ಯಹೂದಿಯರಾದ ಬನೂ ನಝೀರ್ ಗೋತ್ರದವರು ತಮ್ಮ ಸ್ಥಳದಲ್ಲಿ ಮೋಸದಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಬೀಸುಗಲ್ಲನ್ನು ಹಾಕಿ ಕೊಲ್ಲಲು ಗೂಢತಂತ್ರ ಮಾಡಿದಾಗ ಅಲ್ಲಾಹನು ತನ್ನ ಸಂದೇಶವಾಣಿ ಮೂಲಕ ಅದರ ಸಮಾಚಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದನು. ಆಗ ಅವರು ಬೇಗನೆ ಎದ್ದು ಯಾವುದೋ ಆವಶ್ಯಕತೆಗೋಸ್ಕರ ಎಂಬಂತೆ ಕೂಡಲೆ ಅಲ್ಲಿಂದ ಮದೀನಕ್ಕೆ ಮರಳಿದರು. ಅನಂತರ ಸಹಾಬರು ಸ್ವಲ್ಪ ಹೊತ್ತು ಕಾದು ಅವರು ಸಹ ಮದೀನಕ್ಕೆ ಹೋದರು. ಸಹಾಬರು ಮದೀನಕ್ಕೆ ತಲಪಿದಾಗ ಅವರಿಗೆ ತಿಳಿಯಿತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುಹಮ್ಮದ್ ಬಿನ್ ಮಸ್ಲಿಮರನ್ನು ತಮ್ಮ ಬಳಿಗೆ ಕರೆದಿದ್ದಾರೆ ಎಂದು. ಹಝ್ರತ್ ಅಬೂಬಕರ್[ರ] ಹೇಳಿದರು: ಯಾ ರಸೂಲುಲ್ಲಾಹ್ ತಾವು ಎದ್ದು ಹೊರಟಿದ್ದು ಯಾಕೆಂದು ನಮಗೆ ತಿಳಿಯಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಯಹೂದಿಯರು ನನ್ನೊಂದಿಗೆ ವಂಚನೆಯಿಂದ ವರ್ತಿಸಲು ಇಚ್ಛಿಸಿದರು. ಅಲ್ಲಾಹನು ನನಗೆ ಅದರ ಬಗ್ಗೆ ತಿಳಿಸಿದಾಗ ನಾನು ಎದ್ದು ಬಂದೆನು. ಅಲ್ಲಾಹನು ಆ ಪೈಕಿ ಈ ವಚನವನ್ನು ಅವತರಿಸಿದನು:

**ಯಾಅಯ್ಯುಹಲ್ಲಝೀನ ಆಮನುಝ್‌ಕುರು ನೆಮತಲ್ಲಾಹಿ ಅಲೈಕುಮ್ ಇಝ್ ಹಮ್ಮ ಖೌಮುನ್ ಅಯ್ಯಬ್‌ಸುತು ಇಲೈಕುಮ್ ಅಯ್‌ದಿಯಹುಮ್ ಫಕಫ್ಫ ಅಯ್‌ದಿಹಿಮ್ ಅನ್‌ಕುಮ್ ವತ್ತಖುಲ್ಲಾಹ ವಲಲ್ಲಾಹಿ ಫಲ್ ಯತವಕ್ಕಲುಲ್ ಮುಮಿನೀನ್. (ಅಲ್‌ಮಾಯಿದಃ:11)**

ವಿಶ್ವಾಸಿಗಳೇ, ಒಂದು ಕೋಮಿನವರು ನಿಮ್ಮ ಮೇಲೆ ಕೈಯೆತ್ತಲು ಉದ್ದೇಶಿಸಿದಾಗ ನಿಮ್ಮ ಮೇಲೆ ಉಂಟಾದ ಅಲ್ಲಾಹನ ಅನುಗ್ರಹವನ್ನು ಸ್ಮರಿಸಿರಿ. ಅವನು ಅವರ ಕೈಗಳನ್ನು ನಿಮ್ಮಿಂದ ತಡೆದನು. ನೀವು ಅಲ್ಲಾಹನ ಭಯ ಭಕ್ತಿಯುಳ್ಳವರಾಗಿರಿ. ಸತ್ಯವಿಶ್ವಾಸಿಗಳು (ತಮ್ಮ ಎಲ್ಲ ಕಾರ್ಯಗಳಲ್ಲೂ) ಅಲ್ಲಾಹನಲ್ಲಿ ಭರವಸೆ ಇಡಬೇಕಾಗಿದೆ.

ಅಂತೂ ಹಝ್ರತ್ ಮುಹಮ್ಮದ್ ಬಿನ್ ಮಸ್ಲಿಮರನ್ನು ಕರೆಯಿಸಿ ಅವರೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀವು ಬನೂ ನಝೀರ್ ಗೋತ್ರದ ಯಹೂದಿಯರ ಬಳಿಗೆ ಹೋಗಿ ಅವರೊಂದಿಗೆ ಹೇಳಿರಿ, ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಿಮ್ಮನ್ನು ಈ ನಗರದಿಂದ ಹೊರಟು ಹೋಗಲು ಹೇಳಿದ್ದಾರೆ ಎಂದು. ಹಝ್ರತ್ ಮುಹಮ್ಮದ್ ಮುಸ್ಲಿಮ[ರ] ಯಹೂದಿಯರ ಬಳಿಗೆ ಹೋಗಿ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನನ್ನು ನಿಮ್ಮ ಬಳಿಗೆ ಅವರ ಒಂದು ಸಂದೇಶ ನೀಡಲು ಕಳುಹಿಸಿದ್ದಾರೆ. ಆದರೆ ಆ ಸಂದೇಶ ನಿಮಗೆ ನೀಡುವ ಮೊದಲು ನಾನು ನಿಮಗೆ ಒಂದು ವಿಷಯ ನೆನಪಿಸಿಕೊಡಲು ಇಚ್ಛಿಸುತ್ತೇನೆ. ನೀವು ನಿಮ್ಮ ಸಭೆಗಳಲ್ಲಿ ಆ ವಿಷಯದ ಬಗ್ಗೆ ಮಾತನಾಡುತ್ತಿದ್ದಿರಿ.

ಯಹೂದಿಯರು ಕೇಳಿದರು: ಅದೇನು? ಹಝ್ರತ್ ಮುಹಮ್ಮದ್ ಮುಸ್ಲಿಮ ಹೇಳಿದರು: ಮೂಸಾ ಪ್ರವಾದಿಗೆ ಅಲ್ಲಾಹನು ಅವತೀರ್ಣ ಗೊಳಿಸಿದ ತೌರಾತ್ ಮೇಲೆ ಆಣೆ ಹಾಕಿ ಹೇಳುತ್ತೇನೆ, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ಮೊದಲು ನಾನು ನಿಮ್ಮ ಬಳಿಗೆ ಬಂದಾಗ ನೀವು ನಿಮ್ಮ ಮುಂದೆ ತೌರಾತ್ ಗ್ರಂಥ ತೆರೆದಿಟ್ಟು ಜನರ ಮುಂದೆ ನನ್ನೊಂದಿಗೆ ಹೇಳಿದಿರಿ. ಓ ಇಬ್ನು ಮುಸ್ಲಿಮ, ನೀನು ಇಚ್ಛಿಸುವುದಾದರೆ ನಿನಗೆ ನಾವು ಊಟ ನೀಡುವೆವು. ನಾವು ನಿನ್ನನ್ನು ಯಹೂದಿ ಮಾಡಬೇಕೆಂದು ಇಚ್ಛಿಸುವುದಾದರೆ ನಾವು ನಿನ್ನನ್ನು ಯಹೂದಿಯನ್ನಾಗಿ ಮಾಡುವೆವು. ಆಗ ನಾನು ಹೇಳಿದೆ: ನನಗೆ ಊಟ ಮಾಡಿಸಿರಿ. ನನ್ನನ್ನು ಯಹೂದಿಯನ್ನಾಗಿ ಮಾಡಬೇಡಿರಿ. ದೇವನಾಣೆ ನಾನು ಯಹೂದಿಯಾಗಲಾರೆನು. ನೀವು ನನಗೆ ಒಂದು ಬಟ್ಟಲಲ್ಲಿ ಊಟ ನೀಡಿದಿರಿ. ನೀವು ಹೇಳಿದಿರಿ. ನಿಮ್ಮ ಬಳಿಗೆ ಒಬ್ಬ ಮುಗುಳು ನಗುವ ಮಹಾನುಭಾವ ಆಗಮಿಸುವರು. ಆ ವ್ಯಕ್ತಿ ಯುದ್ಧ

ಮಾಡುವರು. ಅವರ ಕಣ್ಣು ಕೆಂಪಗೆ ಇರುವುದು. ಅವರು ಯಮನ್ ದೇಶವಿರುವ ದಿಕ್ಕಿನಿಂದ ಆಗಮಿಸುವರು. ಅವರು ಒಂಟೆ ಮೇಲೆ ಸವಾರಿ ಮಾಡುವವರೂ ಕಂಬಳಿ ಹೊದ್ದು ಕೊಂಡಿರುವವರೂ ಆಗಿರುವರು. ಅವರು ಇದ್ದುದರಲ್ಲಿ ತೃಪ್ತಿ ಪಡುವವರಾಗುವರು. ಅವರ ಖಡ್ಗ ಅವರ ಭುಜದಲ್ಲಿರುವುದು. ಅವರು ಬುದ್ಧಿಶಾಲಿತ್ವದಿಂದ ಮಾತನಾಡುವರು. ಅವರು ನಿಮ್ಮ ನಿಕಟ ಸಂಬಂಧಿ ಎಂಬಂತೆ ವರ್ತಿಸುವರು ಎಂದು ನೀವು ಹೇಳಿದಿರಿ. ಆಗ ಯಹೂದಿಯರು ಹೇಳಿದರು: ಹೌದು ನಾವು ಆ ರೀತಿ ಹೇಳುತ್ತಿದ್ದೆವು. ಆದರೆ ಇವರು ಆ ನಬಿ ಅಲ್ಲ. ಎಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ನಬಿ ಅಲ್ಲ.

ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಹೇಳಿದರು: ನಾನು ನನ್ನ ಸ್ವಂತ ಸಂದೇಶ ನಿಮಗೆ ತಲುಪಿಸಿದೆ. ಈಗ ನಾನು ನಿಮಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತಲಪಿಸಲು ನೀಡಿದ ಸಂದೇಶ ನೀಡುವೆನು. ಅದು ಇದಾಗಿದೆ: ನೀವು ನನ್ನೊಂದಿಗೆ ಮಾಡಿದ ಒಪ್ಪಂದವನ್ನು ಮುರಿದಿದ್ದೀರಿ. ನೀವು ನನಗೆ ಮೋಸ ಮಾಡಲು ಪ್ರಯತ್ನಿಸಿದಿರಿ. ಅಮರ್ ಬಿನ್ ಜಹಾಶ್ ಛಾವಣಿ ಮೇಲೇರಿ ನನ್ನ ಮೇಲೆ ಬೀಸುಗಲ್ಲು ಬೀಳಿಸಲು ಉದ್ದೇಶಿಸಿದ್ದನು. ಯಹೂದಿಯರು ಮೌನವಾಗಿ ಆಲಿಸಿದರು. ಒಂದಕ್ಷರ ಸಹ ಉಚ್ಚರಿಸಲಿಲ್ಲ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಯಹೂದಿಯರೊಂದಿಗೆ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ, ನೀವು ನನ್ನ ಈ ನಗರದಿಂದ ಹೊರಟು ಹೋಗಿರಿ ಎಂದು. ನಾನು ನಿಮಗೆ ಹತ್ತು ದಿನಗಳ ಕಾಲಾವಕಾಶ ನೀಡುತ್ತೇನೆ. ಅನಂತರ ಯಾರಾದರೂ ಕಾಣಿಸಿದರೆ ಅವರ ಕೊರಳು ಕತ್ತರಿಸಲಾಗುವುದು. ಯಹೂದಿಯರು ಹೇಳಿದರು ಇಬ್ನು ಮುಸ್ಲಿಮ! ಈ ಸಂದೇಶ ಓಸ ಗೋತ್ರ ಯಾವೊಬ್ಬ ವ್ಯಕ್ತಿಯು ವ್ಯಕ್ತಿ ತರುವನೆಂದು ಯೋಚಿಸಿಯೇ ಇರಲಿಲ್ಲ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಹೇಳಿದರು: ಈಗ ಹೃದಯ ಪರಿವರ್ತನೆ ಆಗಿದೆ. ಯಹೂದಿಯರು ನಗರ ಬಿಟ್ಟು ಹೋಗುವ ಸಿದ್ಧತೆ ನಡೆಸಿದರು. ಅವರ ಸವಾರಿ ಮೃಗಗಳು ಝೂಜದರ್ ಎಂಬ ಸ್ಥಳದಲ್ಲಿತ್ತು. ಅವುಗಳನ್ನು ತರಲಾಯಿತು. ಬನೂ ಅಶ್‌ಜಅ್ ಗೋತ್ರದಿಂದ ಅವರು ಒಂಟೆಗಳನ್ನು ಬಾಡಿಗೆಗೆ ಪಡೆದು ತಮ್ಮ ಪ್ರಯಾಣದ ಸಿದ್ಧತೆಗಳನ್ನು ಪೂರ್ಣಗೊಳಿಸಿದರು. ಇದು ಇತಿಹಾಸದ ಗ್ರಂಥದ ಉಲ್ಲೇಖವಾಗಿದೆ. (ಸಬ್‌ಲುಲ್ ಹುದಾ ವರ್‌ರಶಾದ್ ಸಂಪುಟ-4, ಪುಟ-317-320, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993 ಸಬ್‌ಲುಲ್ ಹುದಾ ವರ್‌ರಶಾದ್(ಅನುವಾದ) ಸಂಪುಟ-4, ಪುಟ-754, ಝಾವಿಯ ಪಬ್‌ಲಿಶರ್‌ಸ್ ಲಾಹೋರ್ 2013, ಮುಜಮುಲ್ ಬಲದಾನ್ ಸಂಪುಟ-2, ಪುಟ-132)

ಯಹೂದಿಯರ ವರ್ತನೆಯನ್ನು ವಿವರಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ: ಬನೂ ಖುರೈಝರ ವಿದ್ರೋಹ ಕಡೆಗಣಿಸುವಂತಹದಾಗಿರಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಂದಕ್ ಯುದ್ಧದಿಂದ ಮರಳಿದ ಕೂಡಲೇ ಸಹಾಬರೊಂದಿಗೆ ಹೇಳಿದರು: ಮನೆಗಳಲ್ಲಿ ವಿಶ್ರಾಂತಿ ಪಡೆಯಬೇಡಿರಿ. ಸಾಯಂಕಾಲ ಆಗುವುದರೊಳಗೆ ಬನೀ ಖುರೈಝರ ಕೋಟೆಗಳಿಗೆ ತಲಪಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಝ್ರತ್ ಅಲಿಯವರನ್ನು[ರ] ಬನೂ ಖುರೈಝರ ಬಳಿಗೆ ಕಳುಹಿಸಿ ಅವರೊಂದಿಗೆ ಹೇಳಿದರು: ಯಹೂದಿಯರೊಂದಿಗೆ ಕೇಳಿರಿ, ಅವರು ಒಪ್ಪಂದ ಉಲ್ಲಂಘಿಸಿ ವಿದ್ರೋಹ ಮಾಡಿದುದು ಏಕೆ? ಆದರೆ ಬನೂ ಖುರೈಝುರು ನಾಚಿ ಕ್ಷಮೆ ಯಾಚಿಸುವುದಕ್ಕೆ ಬದಲಾಗಿ ಅವರು ಹಝ್ರತ್ ಅಲಿ ಮತ್ತು ಸಂಗಡಿಗರನ್ನು ನಿಂದಿಸಲು ತೊಡಗಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮತ್ತು ಅವರ ಕುಟುಂಬದ ಮಹಿಳೆಯರಿಗೆ ಬೈಯ್ಯಲು ತೊಡಗಿದರು. ಹಝ್ರತ್ ಅಲಿ ಮರಳಿ ಹೋದರು. ಅಷ್ಟರೊಳಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರೊಂದಿಗೆ ಯಹೂದಿಯರ ಕೋಟೆಗಳ ಕಡೆಗೆ ಸಾಗಿದರು. ಯಹೂದಿಯರು ಬೈಗುಳಗಳನ್ನು ಹಾಕುತ್ತಿದ್ದರು ಮತ್ತು ರಸೂಲುಲ್ಲಾಹ್[ಸ]ರವರ ಪತ್ನಿ, ಪುತ್ರಿಯರ ಕುರಿತು ಅಪಶಬ್ದಗಳನ್ನು ಬಳಸುತ್ತಿದ್ದರು. ಹಝ್ರತ್ ಅಲಿ[ರ] ಈ ಅಪಶಬ್ದಗಳಿಂದ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಕಷ್ಟವಾಗಬಹುದು ಎಂದು ಭಾವಿಸಿ ಹೇಳಿದರು: ಯಾ ರಸೂಲುಲ್ಲಾಹ್[ಸ]! ನೀವು ಏಕೆ ಕಷ್ಟಪಡುತ್ತಿದ್ದೀರಿ ನಾನೇ ಈ ಯುದ್ಧಕ್ಕಾಗಿ ಸಾಕಾಗಬಹುದು. ನೀವು ನಿರ್ಗಮಿಸಿರಿ ಎಂದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: ಅವರು ನಮ್ಮನ್ನು ಬೈಯುತ್ತಿದ್ದಾರೆ ಎಂದು ಭಾವಿಸುತ್ತಿದ್ದೇನೆ. ಅದನ್ನು ನನ್ನ ಕಿವಿಗಳು ಕೇಳಿಸ ಬಾರದು ಎಂದು ನಾವು ಬಯಸುತ್ತೇವೆ. ಹಝ್ರತ್ ಅಲಿ ಹೇಳಿದರು: ಹೌದು ಯಾ ರಸೂಲಲ್ಲಾಹ್! ಈ ಮಾತು ಸರಿಯಾಗಿದೆ. ರಸೂಲುಲ್ಲಾಹ್[ಸ] ಹೇಳಿದರು: ಅವರು ಬೈದರೆ ಏನಂತೆ, ಮುಸಾ ನಬಿ ಅವರ ನಬಿ ಆಗಿದ್ದರು. ಅವರಿಗೆ ನನಗಿಂತ ಹೆಚ್ಚು ಕಷ್ಟಗಳನ್ನು ಕೊಟ್ಟಿರುತ್ತಾರೆ. ಹೀಗೆ ಹೇಳುತ್ತಾ ಅವರು ಯಹೂದಿಯರ ಕೋಟೆಗಳಿಗೆ ತಲುಪಿದಾಗ ಯಹೂದಿಯರು ಬಾಗಿಲುಗಳನ್ನು ಮುಚ್ಚಿದರು. ಕೋಟೆಯೊಳಗೆ ನಿಂತು ಯುದ್ಧ ಪ್ರಾರಂಭಿಸಿದರು. ಅವರ ಹೆಂಗಸರು ಸಹ ಯುದ್ಧದಲ್ಲಿ ಭಾಗವಹಿಸಿದರು. ಕೋಟೆಯ ಗೋಡೆಯ ಬದಿಯಲ್ಲಿ ಕೆಲವು ಮುಸ್ಲಿಮರು ಕುಳಿತಿದ್ದಾಗ ಒಬ್ಬ ಯಹೂದಿ ಹೆಂಗಸು ಮೇಲಿನಿಂದ ಕಲ್ಲೆಸೆದು ಒಬ್ಬ ಮುಸ್ಲಿಮನನ್ನು ಕೊಂದಳು. ಆದರೆ ಕೆಲವು ದಿನಗಳ ದಿಗ್ಬಂಧನ ನಂತರ ಯಹೂದಿಯರು ನಮಗೆ ಎದುರಿಸಲು ಸಾಧ್ಯವಿಲ್ಲವೆಂದು ಭಾವಿಸಿಕೊಂಡು ತನ್ನ ಸರದಾರರ ಜೊತೆಯಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಳಿ ಬಂದರು. ಅಬೂ ಲಬಾಬ ಅನ್ಸಾರಿ[ರ] ಅವರ ಮಿತ್ರರೂ ಹಾಗೂ ಓಸ್ ಗೋತ್ರದ ಸರದಾರರು ಆಗಿದ್ದರು. ಅವರಿಗೆ ತಮ್ಮ ಬಳಿಗೆ ಕಳುಹಿಸಲು ಬೇಡಿಕೊಂಡರು. ಆಗ ರಸೂಲುಲ್ಲಾಹ್[ಸ] ಅಬೂ ಲಬಾಬರನ್ನು ಕಳುಹಿಸಿದರು. ಅವರೊಡನೆ ಯಹೂದಿಯರು ಸಲಹೆ ಕೇಳಿದರು. ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳುತ್ತಾರೆ: ನಿರ್ಣಯ ನನ್ನ ಮೇಲೆ ಬಿಟ್ಟು ನೀವು ಆಯುದ್ಧಗಳನ್ನು ಬಿಸಾಕಿರಿ, ನಾವು ಇದನ್ನು ಒಪ್ಪಬೇಕೆ? ಅಬೂಲಬಾಬ ಮುಖ ಕವಿಸಿ ಹೌದು ಎಂದು ಹೇಳಿದ್ದರು ಸಾಂಕೇತಿಕವಾಗಿ ತನ್ನ ಕೊರಳಿನ ಮೇಲೆ ಹೀಗೆ ಕೈಯನ್ನು ಬೀಸಿದರು ಅದು ಹತ್ಯೆಯ ಸಂಕೇತವಾಗಿತ್ತು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅಲ್ಲಿಯ ತಕನ ಯಾವುದೇ ತೀರ್ಮಾನ ಮಾಡಿರಲಿಲ್ಲ. ಆದರೆ ಅಬೂ ಲಬಾಬ ಯಹೂದಿಯರು ತನ್ನ ಒಪ್ಪಂದವನ್ನು ಮುರಿದು ಮಾಡಿದಂತಹ ಅಪರಾಧವು ಹತ್ಯೆಯ ಹೊರತು ಮತ್ತೆನಾಗುವುದು ಎಂದು ಭಾವಿಸಿ ಈ ರೀತಿ ಸಾಂಕೇತಿಕವಾಗಿ ಹೇಳಿದ್ದರು. ಹೀಗೆ ಏನು ಯೋಚಿಸದೆ ಸಾಂಕೇತಿಕವಾಗಿ ಹೇಳಿದ ಒಂದು ಮಾತು ಅವರ ವಿನಾಶಕ್ಕೆ ಕಾರಣವಾಯಿತು. ಆದ್ದರಿಂದ ಯಹೂದಿಯರು ಹೇಳಿದರು: ನಾವು ಮುಹಮ್ಮದ್[ಸ] ರವರ ನಿರ್ಣಯವನ್ನು ಪಾಲಿಸುತ್ತಿದ್ದರು. ಇತರ ಯಹೂದಿ ಗೋತ್ರಗಳ ಹಾಗೆ ಅವರಿಗೆ ಇನ್ನೂ ಹೆಚ್ಚಿನ ಶಿಕ್ಷೆ ವಿಧಿಸುತ್ತಿದ್ದರು ಅವರಿಗೆ ಮದೀನದಿಂದ ಪಾಲಾಯನ ಮಾಡಿಸುತ್ತಿದ್ದರು. ಆದರೆ ಅದು ಅವರ ದುರದೃಷ್ಟವಾಗಿತ್ತು ಯಹೂದಿಯರು ಅವರ ನಿರ್ಣಯವನ್ನು ಮಣ್ಣಿಸಲು ಸಿದ್ಧರಿಲ್ಲ ಬದಲಿಗೆ ನಾನು ತಮ್ಮ ಸಂಗಡಿಗ ಓಸ್ ಗೋತ್ರದ ಸರದಾರರಾದ ಸಅದ್ ಬಿನ್ ಮುಆಝ್[ರ] ಅವರ ನಿರ್ಣಯ ಮನ್ನಿಸುವೆವು. ಅವರು ಏನು ನಿರ್ಣಯ ಕೈಗೊಳ್ಳುತ್ತಾರೋ ಅದನ್ನು ನಾವು ಒಪ್ಪುವೆವು ಆದರೆ ಆ ಸಮಯಕ್ಕೆ ಯಹೂದಿಯರಲ್ಲಿ ಭಿನ್ನಮತ ಉಂಟಾಯಿತು. ಯಹೂದಿರಲ್ಲಿ ಕೆಲವರು ಹೇಳಿದರು: ನಮ್ಮ ಸಮುದಾಯವು ದ್ರೋಹ ಬಗೆದಿದೆ ಮತ್ತು ಮುಸ್ಲಿಮರ ವರ್ತನೆಗಳಿಂದ ಸಾಬೀತಾಗುವುದೇನೆಂದರೆ ಅವರ ಧರ್ಮ ಸತ್ಯವಾಗಿದೆ ಅವರು ನಮ್ಮ ಧರ್ಮವನ್ನು ತ್ಯಜಿಸಿ ಇಸ್ಲಾಮಿನಲ್ಲಿ ಸೇರಿದ್ದಾರೆ.

ಬನೂ ಖುರೈಝರ ಮುಖಂಡರಲ್ಲಿ ಒಬ್ಬನಾಗಿದ್ದ ಅಮರ್ ಬಿನ್ ಸುಅದಿ ತನ್ನ ಸಮುದಾಯದ ಜನರನ್ನು ಆಕ್ಷೇಪಿಸಿ ಹೇಳಿದನು: ನೀವು ವಿದ್ರೋಹ ಮಾಡಿದಿರಿ. ನೀವು ಒಪ್ಪಂದ ಮುರಿದಿರುವಿರಿ. ಈಗ ಒಂದೋ ನೀವು ಮುಸ್ಲಿಮರಾಗಿರಿ ಅಥವಾ ಜಿಝಿಯಾ ನೀಡಲು ಸಮ್ಮತಿಸಿರಿ. ಯಹೂದಿಯರು ಹೇಳಿದರು: ನಾವು ಮುಸ್ಲಿಮರಾಗುವುದಿಲ್ಲ. ಜಿಝಿಯಾ ನೀಡುವುದೂ ಇಲ್ಲ. ಅದಕ್ಕಿಂತ ಕೊಲ್ಲಲ್ಪಡುವುದೇ ಉತ್ತಮ ಎಂದು ಹೇಳಿದರು. ಆ ವ್ಯಕ್ತಿ, ನಾನು ನಿಮ್ಮಿಂದ ಮುಕ್ತನಾಗಿದ್ದೇನೆ ಎಂದು ಹೇಳುತ್ತಾ ಕೋಟೆಯೊಳಗಿಂದ ಹೊರಗೆ ಹೊರಟನು. ಆಗ ಮುಸ್ಲಿಮರ ಒಂದು ದಳದ ಮುಖಂಡ ಮುಹಮ್ಮದ್ ಬಿನ್ ಮುಸ್ಲಿಮ ಕೇಳಿದರು: ನೀವು ಯಾರು? ಆ ವ್ಯಕ್ತಿ ತನ್ನ ಪರಿಚಯ ಹೇಳಿದನು. ಆಗ ಮುಹಮ್ಮದ್ ಬಿನ್ ಮುಸ್ಲಿಮ ಹೇಳಿದರು ನೀವು ಸುರಕ್ಷಿತವಾಗಿ ಹೋಗಿರಿ. ಅನಂತರ ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಲಾತಹ್‌ರಿಮ್‌ನಿ ಇಖಾಲತ ಅಸ್ರಾತಿಲ್ ಕಿರಾಮಿ** ಓ ಅಲ್ಲಾಹ್, ಸಾತ್ವಿಕರಾದ ಮನುಷ್ಯರ ತಪ್ಪುಗಳ ಮೇಲೆ ಪರದೆ ಹಾಕುವ ಸತ್ಕರ್ಮ ಮಾಡುವುದರಿಂದ ನನ್ನನ್ನು ವಂಚಿತನನ್ನಾಗಿ ಮಾಡಬೇಡ. ಅಂದರೆ ಈ ವ್ಯಕ್ತಿ ತನ್ನ ಕೃತ್ಯದ ಮೇಲೆ ಮತ್ತು ತನ್ನ ಸಮುದಾಯದ ಕೃತ್ಯಗಳ ಮೇಲೆ ಪಶ್ಚಾತ್ತಾಪ ಹೊಂದಿದವನಾಗಿದ್ದಾನೆ. ಹೀಗಿರುವಾಗ ಅವನನ್ನು ಕ್ಷಮಿಸುವುದು ನಮ್ಮ ನೈತಿಕ ಹೊಣೆಯಾಗಿದೆ ಎಂದು ಭಾವಿಸುತ್ತೇನೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಘಟನೆ ಬಗ್ಗೆ ತಿಳಿದಾಗ ಅವರು ತನ್ನ ಅತೃಪ್ತಿ ಸೂಚಿಸಲಿಲ್ಲ. ಮುಹಮ್ಮದ್ ಬಿನ್ ಮುಸ್ಲಿಮರ ಕೃತ್ಯವನ್ನು ಮೆಚ್ಚಿ ಹೊಗಳಿದರು. ಮುಸ್ಲಿಮರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶ ಮತ್ತು ತರಬೇತಿಗೆ ಪಾತ್ರರಾಗಿ ಯಾವಾಗಲೂ ನ್ಯಾಯದಿಂದ ವರ್ತಿಸುತ್ತಿದ್ದರು. (ದೀಬಾಚ ತಫಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್ ಸಂಪುಟ-20, ಪುಟ-282-284)

(ಖೈಬರ್ ನಿವಾಸಿಗಳ ಉಪದ್ರವಕಾರಿ ಕೃತ್ಯಗಳ ಮತ್ತು ಅಬೂ ರಾಫಿಅ್ ಯಹೂದಿಯ ಹತ್ಯೆಯ ಬಗ್ಗೆ ವಿವರಣೆ ನೀಡುತ್ತಾ ಹುಝೂರ್ ಹೇಳಿದರು:) ಅಬೂ ರಾಫಿಅ್‌ನನ್ನು ಹತ್ಯೆ ಮಾಡಿದವರ ತಂಡದಲ್ಲಿ ಹಝ್ರತ್ ಮುಹಮ್ಮದ್

ಬಿನ್ ಮುಸ್ಲಿಮ ಸಹ ಸೇರಿದ್ದರು. ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಈ ಘಟನೆಯ ವಿವರಣೆ ಹೀಗೆ ನೀಡಿದ್ದಾರೆ: ಯಹೂದಿ ಮುಖಂಡರ ಪಿತೂರಿ ಮತ್ತು ರೊಚ್ಚಿಗೆಬ್ಬಿಸುವ ಕೃತ್ಯಗಳ ಕಾರಣದಿಂದ ಹಿಜರಿ 5ರ ಕೊನೆಯ ಭಾಗದಲ್ಲಿ ಮುಸ್ಲಿಮರ ವಿರುದ್ಧ ಖಂದಕ್ ಯುದ್ಧವೆಂಬ ಅಪಾಯಕರ ಯುದ್ಧ ನಡೆಯಿತು. ಆ ಯುದ್ಧದ ನಂತರ ಹುಯ್ಯ ಬಿನ್ ಅಖ್‌ತರ್ ಬನೂ ಖುರೈಝರೊಂದಿಗೆ ಶಿಕ್ಷೆಗೆ ಪಾತ್ರನಾಗಿದ್ದನು. ಆದರೆ ಅಬೂ ರಾಫಿಅ್ ಎಂಬ ಉಪನಾಮ ಹೊಂದಿದ್ದ ಸಲಾಮ್ ಬಿನ್ ಅಬಿಲ್ ಹಖೀಖ್ ಖೈಬರ್ ಪ್ರದೇಶದಲ್ಲಿ ಸ್ವತಂತ್ರನಾಗಿ ಮುಸ್ಲಿಮರ ವಿರುದ್ಧ ಪಿತೂರಿಯಲ್ಲಿ ಮಗ್ನನಾಗಿದ್ದನು. ಅವನು ನಜ್ದ್ ಪ್ರದೇಶದ ಅಪರಿಷ್ಕೃತ ಯುದ್ಧಪ್ರೇಮಿ ಗೋತ್ರಗಳನ್ನು ಮುಸ್ಲಿಮರ ವಿರುದ್ಧ ಉತ್ತೇಜಿಸುತ್ತಾ ಇದ್ದನು. ಅವನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಹಗೆತನದಲ್ಲಿ ಕಅಬ್ ಬಿನ್ ಅಶ್ರಫನಿಗೆ ಪೂರ್ಣವಾಗಿ ಸರಿಹೋಲುವವನಾಗಿದ್ದನು. ಅವನು ಗತ್‌ಫಾನ್ ಗೋತ್ರದ ಜನರಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಆಕ್ರಮಿಸಲು ಧಾರಾಳ ಹಣ ನೀಡಿದನು. ಅಬೂ ರಾಫಿಅ್ ಅಲ್ಲಿಗೆ ಮುಗಿಸಲಿಲ್ಲ. ಅವನ ಹಗೆತನದ ಅಗ್ನಿ ಮುಸ್ಲಿಮರ ರಕ್ತಹೀರುವ ದಾಹ ಹೊಂದಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಸ್ತಿತ್ವ ಅವನ ಕಣ್ಣುಗಳಿಗೆ ಮುಳ್ಳಿನ ಹಾಗೆ ಚುಚ್ಚುತ್ತಿತ್ತು. ಕೊನೆಗೆ ಅವನು ಗತ್‌ಫಾನ್ ಮತ್ತು ಇತರ ಗೋತ್ರಗಳನ್ನು ಸಂದರ್ಶಿಸಿ ಮುಸ್ಲಿಮರನ್ನು ನಾಶಮಾಡಲು ಖಂದಕ್ ಯುದ್ಧದಲ್ಲಿ ಸಂಭವಿಸಿದ ಹಾಗೆ ಒಂದು ಬೃಹತ್ ಸೈನ್ಯವನ್ನು ಜಮಾಯಿಸಲು ತೊಡಗಿದನು. ಎಂತಹ ಪರಿಸ್ಥಿತಿ ತಲೆದೋರಿತೆಂದರೆ ಮುಸ್ಲಿಮರ ಕಣ್ಣುಗಳ ಮುಂದೆ ಖಂದಕ್ ಯುದ್ಧದ ದೃಶ್ಯ ತಿರುಗಲು ತೊಡಗಿತು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಖಝ್‌ರಜ್ ಗೋತ್ರದ ಕೆಲವು ಅನ್‌ಸಾರ್‌ಗಳು ಹಾಜರಾಗಿ ವಿನಂತಿಸಿದರು, ಈ ಪಿತೂರಿಗೆ ಚಿಕಿತ್ಸೆ ಇರುವುದು ಅದರ ಮೂಲ ಕಾರಣವಾಗಿರುವ ಅಬೂ ರಾಫಿಅ್‌ನ ಹತ್ಯೆ ಹೊರತು ಬೇರೇನೂ ಅಲ್ಲ ಎಂದು ಹೇಳಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ದೇಶದಲ್ಲಿ ವ್ಯಾಪಕವಾಗಿ ರಕ್ತಪಾತವಾಗುವುದಕ್ಕಿಂತ ಒಬ್ಬ ಪಿತೂರಿಗಾರನ ಹತ್ಯೆ ಉತ್ತಮವಾಗಿದೆ ಎಂದು ನಿರ್ಧರಿಸಿ ಆ ಸಹಾಬರಿಗೆ ಅನುಮತಿ ನೀಡಿದರು. ಹಾಗೆ ಅಬ್ದುಲ್ಲಾ ಬಿನ್ ಅತೀಕ್ ಅನ್‌ಸಾರಿಯ ನೇತೃತ್ವದಲ್ಲಿ ನಾಲ್ಕು ಖಝ್‌ರಜ್ ಸಹಾಬಿಗಳನ್ನು ಅಬೂ ರಾಫಿಅ್‌ನ ಕಡೆಗೆ ರವಾನಿಸಿದರು. ಅದರಲ್ಲಿ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಸಹ ಇದ್ದರು. ಅವರಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಒತ್ತಿ ಹೇಳಿದ್ದರು, ಯಾವುದೇ ಹೆಂಗಸನ್ನಾಗಲಿ ಮಕ್ಕಳನ್ನಾಗಲಿ ಖಂಡಿತವಾಗಿಯೂ ಹತ್ಯೆ ಮಾಡಬಾರದು ಎಂದು. ಹಿಜರಿ ವರ್ಷ 6 ರಮಝಾನ್ ತಿಂಗಳಲ್ಲಿ ಈ ತಂಡ ಹೋಗಿ ಅತ್ಯಂತ ಜಾಗರೂಕತೆಯಿಂದ ತನ್ನ ಕಾರ್ಯ ನಿರ್ವಹಿಸಿ ಮರಳಿತು. ಈ ರೀತಿ ಆ ವಿಪತ್ತಿನ ಮೋಡ ಮದೀನದ ಆಕಾಶದಿಂದ ದೂರ ಸರಿಯಿತು. ಈ ಘಟನೆಯು ಬುಖಾರಿಯಲ್ಲಿ ಸವಿವರವಾಗಿ ನಮೂದಿಸಲ್ಪಟ್ಟಿದೆ. ಆದರೆ ವರದಿಯು ಅತ್ಯಂತ ವಿಶ್ವಾಸನೀಯವಾಗಿದೆ. ಅದರಲ್ಲಿ ಹೀಗೆ ನಮೂದಿಸಲ್ಪಟ್ಟಿದೆ. ಬಿರಾಅ್ ಬಿನ್ ಆಝಿಬ್ ವರದಿ ಮಾಡುತ್ತಾರೆ ಹಝ್ರತ್ ರಸೂಲುಲ್ಲಾಹ್[ಸ] ತನ್ನ ಸಹಾಬರ ಒಂದು ತಂಡ ಅಬೂ ರಾಫಿಅ್‌ಯ ಕಡೆಗೆ ರವಾನಿಸಿದರು. ಅಬ್ದುಲ್ಲಾ ಬಿನ್ ಅತೀಖ್ ಅವರನ್ನು ಆ ತಂಡದ ಅಮೀರರನ್ನಾಗಿ ನಿಯುಕ್ತಗೊಳಿಸಿದ್ದರು. ಅಬೂ ರಾಫಿಅ್‌ನ ಕಥೆ ಏನೆಂದರೆ ಅವನು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಬಹಳಷ್ಟು ತೊಂದರೆ ನೀಡುತ್ತಿದ್ದನು. ಅವರ ವಿರುದ್ಧ ಜನರನ್ನು ಉತ್ತೇಜಿಸುತ್ತಿದ್ದನು ಮತ್ತು ಅವರಿಗೆ ಸಹಾಯ ನೀಡುತ್ತಿದ್ದನು. ಅಬ್ದುಲ್ಲಾ ಬಿನ್ ಅತೀಕ್ ಮತ್ತು ಅವರ ಸಂಗಡಿಗರು ಅಬೂ ರಾಫಿಅ್‌ನ ಕೋಟೆಯ ಸಮೀಪ ತಲುಪಿದಾಗ ಸೂರ್ಯ ಮುಳುಗುವ ಹೊತ್ತಾಗಿತ್ತು. ಆಗ ಅಬ್ದುಲ್ಲಾ ಬಿನ್ ಅತೀಕ್ ತಮ್ಮ ಸಂಗಡಿಗರನ್ನು ಹಿಂದೆ ಬಿಟ್ಟುಬಿಟ್ಟರು ಮತ್ತು ಸ್ವಯಂ ಕೋಟೆಯ ಬಾಗಿಲಿಗೆ ಹೋದರು. ಮತ್ತು ಅವನ ಹತ್ತಿರ ಹೊದಿಕೆಯನ್ನು ಹೊದ್ದುಕೊಂಡು ಬೇಡುವವನ ಹಾಗೆ ಕುಳಿತುಕೊಂಡಿದ್ದರು. ಕೋಟೆಯ ಬಾಗಿಲು ಮುಚ್ಚುವನು ಬಂದು ಅಬ್ದುಲ್ಲಾ ಕಡೆ ನೋಡಿ ಹೇಳಿದನು: ಓ ವ್ಯಕ್ತಿಯೇ ನಾನು ಕೋಟೆಯ ಬಾಗಿಲನ್ನು ಹಾಕುತ್ತಿದ್ದೇನೆ ನೀನು ಒಳಗೆ ಬರಬಹುದಾದರೆ ಬೇಗ ಬಾ ಎಂದನು. ಅಬ್ದುಲ್ಲಾ ಹೊದಿಕೆಯನ್ನು ಹೊದ್ದಿಕೊಂಡು ಅತೀ ಶೀಘ್ರವಾಗಿ ಬಾಗಿಲನ್ನು ಮುಚ್ಚಿ ಅದರ ಕೀಲಿಗೈ ಸಮೀಪದ ಗೋಟಿಗೆ ತೂಗು ಹಾಕಿದನು.

ಅನಂತರ ಅಬ್ದುಲ್ಲ ಬಿನ್ ಅತೀಕ್ ಅವರ ವಿವರಣೆ ಇದೆ: ನಾನು ನನ್ನ ಸ್ಥಳದಿಂದ ಹೊರಟು ಮೊದಲು ಕೋಟೆಯ ಬಾಗಿಲ ಬೀಗವನ್ನು ತೆರೆದೆ. ಏಕೆಂದರೆ ಸಮಯ ಒದಗಿ ಬಂದರೆ ಸುಲಭವಾಗಿ ಹೊರ ಹೋಗಬಹುದು. ಆ ಸಮಯ ಅಬೂ ರಾಫಿಅ್ ಒಂದು ಚೌಕ ರಸ್ತೆಯಲ್ಲಿದ್ದನು ಮತ್ತು ಅವರ ಬಳಿ ಹಲವು ಜನರು ಸಭೆ ಸೇರಿದ್ದರು ಮತ್ತು ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು. ಇ ಜನರು ಎದ್ದು ಹೋದ ನಂತರ ಮೌನ ಆವರಿಸಿತು. ಆಗ ಅಬೂ ರಾಫಿಅ್ ಮನೆಯ ಮೆಟ್ಟಿಲುಗಳನ್ನು ಏರಿ ಮೇಲೆ ಹೋದ ಹಾಗೆಯೇ ನಾನು ಜಾಗರೂಕತೆ ವಹಿಸಿ ನನ್ನ ಹಾದಿಯಲ್ಲಿ ಬರುವ ಬಾಗಿಲುಗಳನ್ನು ಮುಚ್ಚಿ ಒಳಗೆ ಹೋಗುತ್ತಿದ್ದೆ. ನಾನು ಅಬೂ ರಾಫಿಅ್‌ಯ ಕೋಣೆ ಸೇರಿದಾಗ ಆ ಸಮಯ ಅವನು ದೀಪ ಆರಿಸಿ ಮಲಗುವ ತಯಾರಿಯಲ್ಲಿದ್ದನು ಕೋಣೆಯು ಕತ್ತಲಿನಿಂದ ಆವರಿಸಿತ್ತು. ನಾನು ರಾಫಿಅ್‌ನನ್ನು ಕರೆದೆ ಅದಕ್ಕೆ ಉತ್ತರವಾಗಿ ಅವನು ಹೇಳೀದನು: ಯಾರು? ತಕ್ಷಣದಿಂದ ಅವನ ಧ್ವನಿಯನ್ನು ಅನುಸರಿಸಿ ಅವನ ಕಡೆ ಧಾವಿಸಿದೆ ಮತ್ತು ಖಡ್ಗದಿಂದ ಒಂದು ಬಲವಾದ ಆಕ್ರಮಣ ಮಾಡಿದೆ. ತುಂಬ ಕತ್ತಲೆ ಇದ್ದ ಕಾರಣ ಆ ಸಮಯ ನಾನು ತುಂಬ ಗಾಬರಿಗೊಂಡಿದ್ದೆ ಆದ್ದರಿಂದ ಖಡ್ಗದ ಆಕ್ರಮಣ ತಪ್ಪಿ ಹೋಗಿತ್ತು ಅಬೂ ರಾಫಿಅ್ ಚೀರಿಕೊಂಡನು. ಆಗ ನಾನು ಕೋಣೆಯಿಂದ ಹೊರಗೆ ಬಂದೆ. ಸ್ವಲ್ಪ ಸಮಯದ ನಂತರ ಮತ್ತೆ ಕೋಣೆಯ ಒಳಗೆ ಹೋಗಿ ತನ್ನ ಸ್ವರವನ್ನು ಬದಲಾಯಿಸಿ ಕೇಳಿದೆ: ಅಬೂ ರಾಫಿಅ್ ಈ ಸದ್ದು ಎಂತಹದ್ದು? ಅವನು ನನ್ನ ಬದಲಿಸಿದ ಧ್ವನಿಯನ್ನು ಗುರುತಿಸಲಿಲ್ಲ ಹೇಳಿದನು: ನಿನ್ನ ತಾಯಿ ನಿನ್ನನ್ನು ಕಾಣೆಯಾಗಿಸಲಿ ಇದೀಗ ಯಾವನೋ ವ್ಯಕ್ತಿ ಖಡ್ಗದಿಂದ ಆಕ್ರಮಣ ಮಾಡಿದ್ದನು. ನಾನು ಈ ಧ್ವನಿಯನ್ನು ಕೇಳಿ ಮತ್ತೆ ಅವನ ಮೇಲೆ ಎರಗಿ ಖಡ್ಗದಿಂದ ಆಕ್ರಮಣ ಮಾಡಿದೆನು. ಈ ಸಲವು ಸಹ ಅವನು ಸಾಯಲಿಲ್ಲ. ಆಗ ನಾನು ಮೂರನೇಯ ಬಾರಿಗೆ ಆಕ್ರಮಣ ಮಾಡಿ ಅವನ ಹತ್ಯೆ ಮಾಡಿದೆನು.

ಅನಂತರ ಬೇಗ ಬೇಗ ಬಾಗಿಲುಗಳನ್ನು ತೆರೆಯುತ್ತ ಮನೆಯಿಂದ ಹೊರ ನಡೆದೆನು. ಆದರೆ ಮೆಟ್ಟಲಿನಿಂದ ಇಳಿಯುವಾಗ ಇನ್ನು ಕೆಲವು ಮೆಟ್ಟಲುಗಳಿವೆ ಎಂದು ಭಾವಿಸಿ ಮೆಟ್ಟಲಿನಿಂದ ಇಳಿಯುತ್ತಿರುವಾಗ ಅಲ್ಲಿ ಬಿದ್ದುಬಿಟ್ಟೆ. ನನ್ನ ಮೊಣಕಾಲು ಮುರಿದು ಹೋಯಿತು. ಒಂದು ವರದಿಯಲ್ಲಿ ಹೀಗೆ ಇದೆ. ಮೊಣಕಾಲು ಜೋಡು ಜಾರಿ ಹೋಯಿತು. ಆದರೆ ನಾನು ಅದನ್ನು ನನ್ನ ಹೊದಿಕೆಯಿಂದ ಕಟ್ಟಿಕೊಂಡು ಮೆಲ್ಲನೆ ಹೊರಗೆ ಬಂದೆನು. ಆದರೆ ನಾನು ಮನದಲ್ಲಿ ನಿಶ್ಚಯಿಸಿ ಕೊಂಡೆನು ಎಲ್ಲಿಯವರೆಗೆ ಅಬೂ ರಾಫಿಅ್ ಅವನು ಮರಣ ಹೊಂದಿದನು ಎಂಬ ಸುದ್ದಿ ಖಚಿತ ಪಡಿಸಿಕೊಳ್ಳುವುದಿಲ್ಲವೋ ಇಲ್ಲಿಂದ ಹೊರಗೆ ಹೋಗುವುದಿಲ್ಲ ಎಂದು. ಆದ್ದರಿಂದ ನಾನು ಕೋಟೆಯ ಸಮೀಪ ಒಂದು ಸ್ಥಳದಲ್ಲಿ ಕುಳಿತುಕೊಂಡೆನು. ಮುಂಜಾನೆಯಾಗುತ್ತಲೇ ಕೋಟೆಯ ಒಳಗಿನಿಂದ ಯಾರದ್ದೊ ಧ್ವನಿ ಕೇಳಿಸಿತು ಅಬೂ ರಾಫಿಅ್ ಮರಣಹೊಂದಿದ್ದಾನೆ ಎಂದು.

ಅನಂತರ ಎದ್ದು ನಿಧಾನವಾಗಿ ತಮ್ಮ ಸಂಗಡಿಗರೊಂದಿಗೆ ಮದೀನಕ್ಕೆ ಬಂದು ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಅಬೂ ರಾಫಿಅ್‌ನ ಹತ್ಯೆಯ ಸುದ್ದಿ ನೀಡಿದೆವು. ಹುಝೂರ್[ಸ] ಅವರು ಈ ಘಟನೆಯನ್ನು ಕೇಳಿ ನನಗೆ ಉಪದೇಶಿಸಿದರು: ನಿಮ್ಮ ಕಾಲು ಮುಂದೆ ಮಾಡಿ ಎಂದಾಗ ನಾನು ನನ್ನ ಕಾಲ ಮುಂದೆ ಮಾಡಿದೆ. ಆಗ ಹುಝೂರ್[ಸ] ದುಆ ಮಾಡುತ್ತ ತಮ್ಮ ಶುಭ ಹಸ್ತವನ್ನು ಅದರ ಮೇಲೆ ಸವರಿದರು. ಆಗ ನನಗೆ ಹೀಗೆ ಬಾಸವಾಯಿತು ನನ್ನ ಕಾಲಿಗೆ ನೋವೇ ಇರಲಿಲ್ಲ ಎಂದು.

ಇನ್ನೊಂದು ವರದಿಯಲ್ಲಿ ಹೀಗೆ ವಿವರ ಸಿಗುತ್ತದೆ ಅಬ್ದುಲ್ಲಾ ಬಿನ್ ಅತೀಖ್ ಅವರು ಅಬೂ ರಾಫಿಅ್ ಮೇಲೆ ಆಕ್ರಮಣ ಮಾಡಿದಾಗ ಅವನ ಹೆಂಡತಿ ಜೋರಾಗಿ ಚೀರಿದಾಗ ನನಗೆ ಚಿಂತೆ ಉಂಟಾಯಿತು. ಅವಳ ಚೀರಾಟ ಕೇಳಿ ಇತರ ಜನರು ಎಚ್ಚರಗೊಂಡರೆ ಕಷ್ಟವಾದೀತು ಎಂದು ಆಗ ಅವನ ಹೆಂಡತಿಯ ಮೇಲೆ ಖಡ್ಗ ಎತ್ತಿದೆ ಆದರೆ ಮರುಕ್ಷಣವೇ ಹುಝೂರ್[ಸ] ಅವರು ಮಹಿಳೆಯರನ್ನು ಹತ್ಯೆ ಮಾಡಬಾರದು ಎಂಬ ಉಪದೇಶ ನೆನಪಿಗೆ ಬಂತು ಆದ್ದರಿಂದ ಅವಳ ಮೇಲೆ ಆಕ್ರಮಣ ಮಾಡಲಿಲ್ಲ.

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆಯಲಾಗಿದೆ. ಅಬೂ ರಾಫಿಅ್‌ನ ಹತ್ಯೆಯ ನ್ಯಾಯಬದ್ಧತೆ ಬಗ್ಗೆ ನಾವು ಇಲ್ಲಿ ಚರ್ಚಿಸುವ ಆವಶ್ಯಕತೆ ಇಲ್ಲ. ಅಬೂ ರಾಫಿಅ್‌ನ ರಕ್ತಪಿಪಾಸು ಕೃತ್ಯಗಳು ಚರಿತ್ರೆಯ ಪುಟಗಳಲ್ಲಿ ದಾಖಲಿಸಲ್ಪಟ್ಟಿವೆ. ಆ ಕಾಲದಲ್ಲಿ ಮುಸ್ಲಿಮರು ಅತ್ಯಂತ ಬಲಹೀನರಾಗಿದ್ದು ನಾಲ್ಕು ದಿಕ್ಕುಗಳಿಂದಲೂ ವಿಪತ್ತುಗಳಿಂದ ಆವರಿಸಲ್ಪಟ್ಟಿತ್ತು. ದೇಶವಿಡೀ ಮುಸ್ಲಿಮರನ್ನು ನಾಶಮಾಡಲು ಒಗ್ಗೂಡುತ್ತಿತ್ತು. ಅಂತಹ ವಿಷಮ ಪರಿಸ್ಥಿತಿಯಲ್ಲಿ ಅಬೂ ರಾಫಿಅ್ ಅರಬ್ ದೇಶದ ವಿವಿಧ ಗೋತ್ರಗಳನ್ನು ಇಸ್ಲಾಮ್ ವಿರುದ್ಧ ಉತ್ತೇಜಿಸುತ್ತಿದ್ದನು. ಖಂದಕ್ ಯುದ್ಧ ಕಾಲದಲ್ಲಿ ಸಂಭವಿಸಿದ ಹಾಗೆಯೇ ಅರಬ್ ದೇಶದ ಅಪರಿಷ್ಕೃತ ಗೋತ್ರಗಳು ಒಟ್ಟಾಗಿ ಪುನಃ ಮದೀನವನ್ನು ಆಕ್ರಮಿಸಲು ಸಿದ್ಧರಾಗಲಿ ಎಂದು ಪ್ರಯತ್ನಿಸುತ್ತಿದ್ದನು. ಅರಬ್ ದೇಶದಲ್ಲಿ ಆಗ ಯಾವುದೇ ಸರಕಾರವಿರಲಿಲ್ಲ. ಅದರ ಮೂಲಕ ನ್ಯಾಯವನ್ನು ಆವಶ್ಯಪಡುವ ಸ್ಥಿತಿ ಇರಲಿಲ್ಲ. ಪ್ರತಿಯೊಂದು ಗೋತ್ರ ತನ್ನ ಪ್ರದೇಶದಲ್ಲಿ ಸ್ವತಂತ್ರವಾಗಿ ಸ್ವಯಂ ಅಧಿಕಾರ ಹೊಂದಿತ್ತು. ಆದುದರಿಂದ ತಮ್ಮ ರಕ್ಷಣೆಗೆ ಸ್ವತಃ ಯಾವುದಾದರೂ ಉಪಾಯ ಮಾಡಬೇಕಾಗುತ್ತಿತ್ತು. (ಸೀರತ್ ಖಾತಮನ್ನಬೀಯೀನ್ ಪುಟ– 721–724)

ಹಿಂದಿನ ಖುತ್‌ಬದಲ್ಲಿ ಅದರ ವ್ಯಾಖ್ಯಾನ ವಿವರವಾಗಿ ಮಾಡಲಾಗಿದೆ. ಏಕೆ ಯಾವ ಕಾರಣಗಳಿಂದಾಗಿ ಈ ನಿರ್ಣಯ ಕೈಗೊಳ್ಳ ಬೇಕಾಯಿತು?

ಮದೀನದಲ್ಲಿದ್ದ ಸರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ವಂತ ಸರಕಾರವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಸಹಾಬರು ಮಾಡಿದುದು ಸರಿಯಾದುದೇ ಆಗಿತ್ತು. ಯುದ್ಧದ ಸ್ಥಿತಿಯಲ್ಲಿ ಒಂದು ಸಮುದಾಯ ಸಾವು ಬದುಕಿನ ಪರಿಸ್ಥಿತಿಯಲ್ಲಿರುವಾಗ ಇಂತಹ ಕಾರ್ಯಯೋಜನೆಗಳು ಸಂಪೂರ್ಣವಾಗಿ ನ್ಯಾಯಬದ್ಧವಾಗಿರುತ್ತವೆ ಎಂದು ಗಣಿಸಲಾಗುತ್ತಿದೆ.

ಹಝ್ರತ್ ಉಮರ್(ರ) ಅವರು ಹಝ್ರತ್ ಮುಹಮ್ಮದ್ ಮುಸ್ಲಿಮ(ರ) ಅವರನ್ನು ಜುಹೈನ ಗೋತ್ರದ ಝಕಾತ್ ವಸೂಲಿ ಮಾಡಲು ನಿಯುಕ್ತಿಗೊಳಿಸಿದ್ದರು. ಯಾವಾಗಾದರು ಯಾವೊಬ್ಬ ಅಧಿಕಾರಿಯ ವಿರುದ್ಧ ಖಿಲಾಫತ್ ಆಸ್ಥಾನದಲ್ಲಿ ದೂರುಗಳು ಬಂದಿದ್ದರೆ ಅದರ ತನಿಖೆಗೋಸ್ಕರ ಹಝ್ರತ್ ಉಮರ್(ರ) ಅವರನ್ನು ಕಳುಹಿಸುತ್ತಿದ್ದರು. ಅದೇ ರೀತಿ ಹಝ್ರತ್ ಉಮರ್(ರ) ಅವರಿಗೆ ಅವರ ಮೇಲೆ ತುಂಬ ವಿಶ್ವಾಸವಿತ್ತು ಆದ್ದರಿಂದ ಸರಕಾರಿ ತೆರಿಗೆಗಳನ್ನು ವಸೂಲು ಮಾಡಲು ಅವರನ್ನೇ ಕಳುಹಿಸುತ್ತಿದ್ದರು. ಅದಲ್ಲದೆ ಅವರು ಹಝ್ರತ್ ಉಮರ್(ರ) ಅವರ ಬಳಿ ವಿವಿಧ ಕ್ಷೇತ್ರಗಳ ಸಮಸ್ಯೆಗಳನ್ನು ಪರಿಹರಿಸಲು ನಿಯುಕ್ತಗೊಳಿಸುತ್ತಿದ್ದರು. ಕೂಫದಲ್ಲಿ ಹಝ್ರತ್ ಸಅದ್ ಬಿನ್ ಅಬಿ ವಖಾಸ್(ರ) ಒಂದು ಅರಮನೆ ನಿರ್ಮಿಸಿದ್ದರು ಅದರ ಉಸ್ತುವಾರಿಗೋಸ್ಕರ ಹಝ್ರತ್ ಉಮರ್(ರ) ರವರ ಪ್ರತಿನಿಧಿಯಾಗಿದ್ದರು. ಆ ಕುರಿತು ಒಂದು ವರದಿ ಹೀಗೆ ದೊರೆಯುತ್ತದೆ. ಹಝ್ರತ್ ಉಮರ್ ಅವರಿಗೆ ತಿಳಿದುಬಂತು ಹಝ್ರತ್ ಸಅದ್ ಬಿನ್ ಅಬಿ ವಖಾಸ್ ಒಂದು ಅರಮನೆಯನ್ನು ಕಟ್ಟಿದ್ದಾರೆ ಮತ್ತು ಅದಕ್ಕೆ ಒಂದು ಬಾಗಿಲು ಇದೆ ಆ ಕಾರಣದಿಂದ ಧ್ವನಿ ಕೇಳಿಸುವುದಿಲ್ಲ ಆದುದರಿಂದ ಅವರು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಅವರನ್ನು ಕಳುಹಿಸಿದ್ದರು. ಹಝ್ರತ್ ಉಮರ್ ಅವರ ಯಾವುದೇ ಕಾರ್ಯ ತಮ್ಮ ಇಷ್ಟ ಪ್ರಕಾರ ಕೈಗೊಳ್ಳಬೇಕಾದರೆ ಅವರನ್ನೇ ಅಂದರೆ ಹಝ್ರತ್ ಮುಸ್ಲಿಮ ಅವರನ್ನು ಕಳುಹಿಸುತ್ತಿದ್ದರು. ಹಝ್ರತ್ ಉಮರ್ ಹೇಳಿದರು ಸಅದ್ ಬಳಿಗೆ ಹೋಗಿ ಅವನ ಬಾಗಿಲು ಸುಟ್ಟು ಹಾಕಿರಿ. ಆದ್ದರಿಂದ ಅವರು ಕೂಪ ತಲುಪಿ ಬಾಗಿಲು ಸಮೀಪ ಹೋಗಿ ಬಾಗಿಲನ್ನು ಸುಟ್ಟು ಹಾಕಿದರು. ಹಝ್ರತ್ ಸಅದ್ ಅವರಿಗೆ ಇದರ ಬಗ್ಗೆ ತಿಳಿದಾಗ ಹೊರಗೆ ಬಂದರು ಆಗ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಅವರಿಗೆ ಎಲ್ಲಾ ವಿವರ ನೀಡಿದರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಸಂಪುಟ–6, ಪುಟ–28)

ಹಝ್ರತ್ ಉಸ್ಮಾನ್‌ರ(ರ) ಶಹಾದತ್ ನಂತರ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಏಕಾಂತ ವಾಸ ಮಾಡತೊಡಗಿದರು ಮತ್ತು ಮರದ ಖಡ್ಗವನ್ನು ಮಾಡಿಸಿದರು. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನನಗೆ ಒಂದು ಖಡ್ಗವನ್ನು ಪಾರಿತೋಷಿಕವಾಗಿ ನೀಡಿ ಹೀಗೆ ಹೇಳಿದರು: ಬಹುದೇವಾರಾಧಕ ಜನರು ನಿಮ್ಮ ವಿರುದ್ಧ ಯುದ್ಧ ಮಾಡುತ್ತಿರುವ ತನಕ ನೀವು ಈ ಖಡ್ಗ ಬಳಸಿ ಜಿಹಾದ್ ಮಾಡಿರಿ. ಮುಸ್ಲಿಮರು ಒಬ್ಬರಿನ್ನೊಬ್ಬರನ್ನು ಹತ್ಯೆ ಮಾಡಲು ಪ್ರಾರಂಭಿಸುವುದನ್ನು ನೀವು ಕಂಡರೆ ನಿಮ್ಮ ಖಡ್ಗವನ್ನು ಒಂದು ಬಂಡೆಕಲ್ಲಿಗೆ ಬಡಿದು ತುಂಡರಿಸಿರಿ. ಅನಂತರ ಯಾವುದಾದರೂ ದುಷ್ಕರ್ಮಿಯ ಕೈ ನಿಮ್ಮ ಬಳಿಗೆ ತಲಪುವ ತನಕ ಅಥವಾ ಮೃತ್ಯು ಬಂದೆರಗುವ ತನಕ ಮನೆಯಲ್ಲಿಯೇ ಇರಿ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಹಾಗೆಯೇ ಮಾಡಿದರು. ಅವರು ಮುಸ್ಲಿಮರ ಅಂತಃಕಲಹಗಳಲ್ಲಿ ಭಾಗವಹಿಸಲಿಲ್ಲ. ಜಮಲ್ ಮತ್ತು ಸಿಫ್ಫೀನ್ ಯುದ್ಧಗಳಲ್ಲಿ ಭಾಗವಹಿಸಲಿಲ್ಲ. (ಉಸದುಲ್‌ಗಾಬ ಸಂಪುಟ–4, ಪುಟ–319 ಮತ್ತು ಅಲ್‌ಅಸಾಬ ಸಂಪುಟ–6, ಪುಟ–29)

ಝುಬೈಅ ಬಿನ್ ಹುಸೈನ್ ಸಅಲಬಿ ವರದಿ ಮಾಡುತ್ತಾರೆ: ನಾವು ಹಝ್ರತ್ ಹುಝೈಫ(ರ) ಅವರ ಬಳಿ ಕುಳಿತಿದ್ದೆವು ಅವರು ಹೇಳಿದರು: ನಾನು ಇಂತಹ ಒಬ್ಬ ಮನುಷ್ಯನ ಪೈಕಿ ತಿಳಿದವನಾಗಿದ್ದೇನೆ ಅವನಿಗೆ ಅಂತಃಕಲಹಗಳು ಯಾವ ಹಾನಿ ಉಂಟು ಮಾಡಲಾರವು. ನಾವು ಕೇಳಿದೆವು ಅವರು ಯಾರು. ಹಝ್ರತ್ ಹುಝೈಫ ಹೇಳಿದರು: ಅವರು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಅನ್ಸಾರಿ ಆಗಿದ್ದಾರೆ. ಹಝ್ರತ ಹುಝೈಫ ತೀರಿ ಹೋದ ನಂತರ ಅಂತಃಕಲಹ ಉಂಟಾಯಿತು ಮದೀನದಿಂದ ಹೊರಗೆ ಹೋಗುವವರ ಜೊತೆಯಲ್ಲಿ ಹೊರಟುಬಿಟ್ಟೆ ಮತ್ತು ನಾನು ಒಂದು ನೀರಿನ ಸ್ಥಳಕ್ಕೆ ತಲುಪಿದೆನು ಅಲ್ಲಿ ನೀರು ಲಭ್ಯವಿತ್ತು. ಅಲ್ಲಿ ಒಂದು ಮುರಿದು ಬಿದ್ದ ಒಂದು ಗುಡಿಸಲು ಕಂಡೆನು. ಅದು ಗಾಳಿಯ ರಭಸದಿಂದ ಅಲ್ಲಾಡುತ್ತಿತ್ತು ನಾನು ಕೇಳಿದೆ ಈ ಗುಡಿಸಲು ಯಾರದು ಎಂದು. ಅದಕ್ಕೆ ಜನರು ಹೇಳಿದರು ಇದು ಮುಹಮ್ಮದ್ ಬಿನ್ ಮುಸ್ಲಿಮರದ್ದಾಗಿದೆ. ನಾನು ಅವರಿಗೆ ಹೇಳಿದೆ ಅಲ್ಲಾಹನ ದಯೆ ನಿಮ್ಮ ಮೇಲಿರಲಿ ನೀವು ಮುಸ್ಲಿಮರ ಅತ್ಯುತ್ತಮ ಜನರಲ್ಲಿ ಒಬ್ಬರಾಗಿದ್ದೀರಿ ಎಂದು ಕಾಣುತ್ತಿದ್ದೇನೆ. ನೀವು ನಿಮ್ಮ ನಗರ, ನಿಮ್ಮ ಮನೆ, ಪತ್ನಿ ಮತ್ತು ಮಕ್ಕಳು ನೆರೆಹೊರೆಯವನ್ನು ಬಿಟ್ಟುಬಂದಿದ್ದೀರಿ. ಅವರು ಹೇಳಿದರು ಇದೆಲ್ಲ ಅಂತಃಕಲಹ ಕಾರಣದಿಂದಾಗಿ ಬಿಟ್ಟು ಬಂದಿರುತ್ತೇನೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–339, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಅವರು ಯಾವಾಗ ನಿಧನ ಹೊಂದಿದರು ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ವಿವಿಧ ವರದಿಗಳ ಪ್ರಕಾರ ಅವರು ಹಿಜರಿ 43, 46ರಲ್ಲಿ ಅಥವಾ ಹಿಜರಿ 47ರಲ್ಲಿ ಮದೀನದಲ್ಲಿ ನಿಧನ ಹೊಂದಿದರು. ಆಗ ಅವರ ಪ್ರಾಯ 77 ಆಗಿತ್ತು. ಆಗ ಮದೀನದ ಅಮೀರ್ ಆಗಿದ್ದ ಮರ್‌ವಾನ್ ಬಿನ್ ಹಕಮ್ ಅವರ ಜನಾಝ ನಮಾಝ್ ನಿರ್ವಹಿಸಿದರು. ಕೆಲವು ವರದಿಗಳ ಪ್ರಕಾರ ಅವರನ್ನು ಯಾರೋ ಶಹೀದರನ್ನಾಗಿ ಮಾಡಿದ್ದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–5, ಪುಟ–107, ಮುಹಮ್ಮದ್ ಬಿನ್ ಮುಸ್ಲಿಮ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003, ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್ ಸಂಪುಟ–3, ಪುಟ–433, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2010)

ಅವರ ಪ್ರಸ್ತಾವನೆ ಇಲ್ಲಿಗೆ ಮುಗಿದಿದೆ. ಜುಮುಅ ನಮಾಝ್ ನಿರ್ವಹಿಸಿದ ನಂತರ ಒಂದು ಜನಾಝ ಹಾಝಿರ್ ನಮಾಝ್ ನಿರ್ವಹಿಸುವೆನು. ಮುಕರ್ರಮ್ ಸದರುದ್ದೀನ್ ಸಾಹಿಬರ ಪಿತ ಮುಕರ್ರಮ್ ತಾಜ್‌ದೀನ್ ಸಾಹಿಬ್ 2020 ಫೆಬ್ರವರಿ ದಿನಾಂಕ 10ರಂದು 84ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರು ಅಲ್ಲಾಹನ ಅನುಗ್ರಹದಿಂದ ಮೂಸೀ ಆಗಿದ್ದರು. ಅವರು ಯುಗಾಂಡ ದೇಶದಲ್ಲಿ ಜನಿಸಿದ್ದರು. 1967ರಲ್ಲಿ ಯು.ಕೆ.ಗೆ ಆಗಮಿಸಿದರು. 1984ರಲ್ಲಿ ಇಸ್ಲಾಮಾಬಾದಿನ ಜಮೀನು ಖರೀದಿಸಿದಾಗ ಅವರು ಅಲ್ಲಿ ಸೇವೆ ಮಾಡಲು ಮುಂದೆ ಬಂದರು. ಅನಂತರ 22 ವರ್ಷಗಳ ತನಕ ಬಹಳ ನಿಷ್ಠೆಯಿಂದಲೂ ನಿಸ್ವಾರ್ಥವಾಗಿಯೂ ಸೇವೆ ಸಲ್ಲಿಸುವ ಭಾಗ್ಯ ಗಳಿಸಿದರು. ಇಸ್ಲಾಮಾಬಾದಿನಲ್ಲಿ ಜರಗಿಸಲಾದ ಪ್ರಥಮ ಜಲ್ಸದ ಮೊದಲುಗೊಂಡು ಅಲ್ಲಿ ಜರಗಿಸಲಾದ ಕೊನೆಯ ಜಲ್ಸದ ತನಕ ಅವರು ಬಹಳ ಪರಿಶ್ರಮಪಟ್ಟು ಕೆಲಸ ಮಾಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಪ್ರತಿಯೊಂದು ಅನುಕೂಲತೆಗಳನ್ನು ಒದಗಿಸಲು ಸಾಧ್ಯವಿರುವಷ್ಟು ಪ್ರಯತ್ನ ಮಾಡುತ್ತಿದ್ದರು. ಎಲ್ಲ ತರಹದ ಯಾಂತ್ರಿಕ (Technical) ಕೆಲಸಗಳನ್ನು ಮಾಡುತ್ತಿದ್ದರು. ಆದುದರಿಂದಲೇ ಅವರಿಗೆ ಇಸ್ಲಾಮಬಾದ್‌ನಲ್ಲಿ ಹಗಲಿರಳು ಎಲ್ಲಾ ರೀತಿಯ ಕೆಲಸಗಳನ್ನು ನಿರ್ವಹಿಸುವ ಭಾಗ್ಯ ದೊರೆಯಿತು. ಅದರಲ್ಲಿ ಎಲೆಕ್ಟ್ರಾನಿಕ್, ಪ್ಲಂಬಿಂಗ್, ಸೆಂಟ್ರಿ ಹಾಗೂ ಇತ್ಯಾದಿ ಕೆಲಸಗಳು ಶಾಮಿಲಾಗಿವೆ. ದಿವಂಗತರು ನಮಾಝ್ ಹಾಗೂ ಉಪವಾಸಗಳನ್ನು ಕಡ್ಡಾಯವಾಗಿ ನಿರ್ವಹಿಸುತ್ತಿದ್ದರು. ಧಾರ್ಮಿಕ ಶ್ರದ್ಧಾಳುಗಳಾಗಿದ್ದರು. ಅತ್ಯಂತ ಸಜ್ಜನ ಸ್ವಭಾವದವರಾಗಿದ್ದರು. ಅನುಸರಣೆಯ ಭಾವವುಳ್ಳವರಾಗಿದ್ದರು. ನಿಧಾನಗತಿ ಹೊಂದಿದ ಮನುಷ್ಯರಾಗಿದ್ದರು. ಖಿಲಾಫತ್‌ನೊಂದಿಗೆ ಅವರ ಸಂಬಂಧವು ತುಂಬ ಆಳವಾದದ್ದು ಹಾಗೂ ನಿಷ್ಠೆಯುಳ್ಳದ್ದು ಮತ್ತು ಪ್ರಾಮಾಣಿಕವಾಗಿತ್ತು. ಅವರ ಮೊಮ್ಮಗ ಮುದಬ್ಬಿರ್ ದೀನ್ ಸಾಹೆಬ್ ಸಂಘಟನೆಯ ಪ್ರಚಾರಕರಾಗಿದ್ದಾರೆ. ಅವರು ಯು.ಕೆ ಯ ಜಾಮಿಯಾದಿಂದ ಉತ್ತೀರ್ಣರಾಗಿದ್ದರು. ಇಂದು ಅವರು ಎಂ.ಟಿ.ಎ ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ಬರೆಯುತ್ತಾರೆ ಬಹಳಷ್ಟು ಜನರು ಇಸ್ಲಾಮಬಾದಿನಲ್ಲಿ ವಾಸವಾಗಿದ್ದರು. ಅವರು ಹೇಳುತ್ತಾರೆ ಅವರು ಅತ್ಯಂತ ಶ್ರಮಿಕ ವ್ಯಕ್ತಿಯಾಗಿದ್ದರು. ನನ್ನ ಪ್ರೀತಿಯ ಅಜ್ಜ ಹೇಳುತ್ತಿದ್ದರು ಅವರು ಇಸ್ಲಾಮಬಾದಿಗೆ ಬಂದಾಗ ಪ್ರಾರಂಭದಲ್ಲಿ ಒಬ್ಬಂಟಿಯಾಗಿ ಇರುತ್ತಿದ್ದರು. ವಿದ್ಯುತ್ ಇರಲಿಲ್ಲ ತುಂಬ ಕಠಿಣ ಸಮಯವಾಗಿತ್ತು ಅದು. ಆದರೂ ನಾನು ಜಮಾಅತ್ ಮತ್ತು ಖಲೀಫರಿಗೋಸ್ಕರ ಕೆಲಸ ಮಾಡುತ್ತಿದ್ದೆ ಎಂಬ ಸಂತೋಷ ನನಗಿತ್ತು. ಸಮಯಕ್ಕೆ ಸರಿಯಾಗಿ ನಮಾಝ್ ನಿರ್ವಹಣೆ ಸ್ವಯಂ ತನ್ನ ಕೈಗಳಿಂದ ಕೆಲಸ ನಿರ್ವಹಿಸುವವರು, ಅತಿಥಿ ಸತ್ಕಾರ ಮತ್ತು ಸಹನ ಶೀಲತೆ ಅವರ ಉದಾತ್ತ ಗುಣಗಳಾಗಿದ್ದವು. ಪತ್ರ ಬರೆಯುವವರು ಇವೇ ಗುಣಗಳನ್ನು ಬರೆದಿದ್ದಾರೆ. ಮಜೀದ್ ಸಿಯಾಲ್‌ಕೋಟಿ ಸಾಹೇಬರು ಇದನ್ನೆ ಹೇಳಿದರು. ಇಲ್ಲಿ ಇಸ್ಲಾಮಬಾದಿನಲ್ಲಿ ಅವರು ವರ್ಕ್‌ಶಾಪ್ ಮಾಡಿದ್ದರು. ಯಂತ್ರಗಳ ಕಾರ್ಯದಲ್ಲಿ ನಿಪುಣರಾಗಿದ್ದರು ಲಂಡನ್ನಿನ ವಿವಿಧ ಕಂಪನಿಗಳೊಂದಿಗೆ ಅವರು ಸಂಪರ್ಕ ಬೆಳೆಸಿದ್ದರು. ಸದಾ ಹಸನ್ಮುಖಿ ಆಗಿದ್ದರು. ನನೋಸ್ಕರ ದುಆ ಮಾಡಿ ಎಂದೇ ಹೇಳುತ್ತಿದ್ದರು. ಕೆಲಸ ಮಾಡುತ್ತಲೇ ಇಸ್ಲಾಮಬಾದಿನಲ್ಲಿ ಒಂದು ಸಣ್ಣದಾದ ಕೋಣೆಯಲ್ಲಿ ವಾಸ ಮಾಡುತ್ತಿದ್ದರು. ಎಂದೂ ಅವರು ಮಡದಿ ಮತ್ತು ಮಕ್ಕಳ ಬಗ್ಗೆ ಚಿಂತಿಸಲಿಲ್ಲ ಅವರು ಲಂಡನ್ನಿನಲ್ಲಿ ಇರುತ್ತಿದ್ದರು ಆಗಾಗ ಇಲ್ಲಿ ಬರುತ್ತಿದ್ದರು.

ಅಲ್ಲಾಹನು ಮೃತರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸುವವನಾಗಲಿ. ಅವರ ಮಕ್ಕಳು ಮತ್ತು ಸಂತಾನ ಪರಂಪರೆ ನಿಷ್ಠೆಯಲ್ಲಿ ವರ್ಧನೆ ಪಡೆಯುವವರಾಗಲಿ, ಅವರಿಗೆ ಅಲ್ಲಾಹನು ಸಹನೆಯನ್ನೂ ಧೈರ್ಯವನ್ನೂ ದಯಪಾಲಿಸಲಿ – ಆಮೀನ್.

**********************

# ಜುಮುಅ ಖುತ್‌ಬ

**ಯಾವ ಭವಿಷ್ಯವಾಣಿ ಈಡೇರುವ ಬಗ್ಗೆ ದೀರ್ಘ ಕಾಲದಿಂದ ಪ್ರತೀಕ್ಷಿಸಲಾಗುತ್ತಿತ್ತೋ ಆ ಭವಿಷ್ಯವಾಣಿ ಬಗ್ಗೆ ಅಲ್ಲಾಹನು ಅನುಗ್ರಹ ಮತ್ತು ಕಾರುಣ್ಯದ ಮೂಲಕ ತನ್ನ ಇಲ್‌ಹಾಮ್ ಮತ್ತು ಚಿಹ್ನೆಗಳ ಮೂಲಕ ನನಗೆ ತಿಳಿಸಿದನು, ಈ ಭವಿಷ್ಯವಾಣಿ ನನ್ನಲ್ಲಿ ಈಡೇರಿದೆ ಎಂದು. ಈಗ ಇಸ್ಲಾಮಿನ ಶತ್ರುಗಳಿಗೆ ಅಲ್ಲಾಹನು ಹೀಗೆ ಪರಿಪೂರ್ಣವಾದ ಸಾಕ್ಷ್ಯಾಧಾರ ತೋರಿಸಿದ್ದಾನೆ: ಇಸ್ಲಾಮ್, ಅಲ್ಲಾಹನ ಸತ್ಯ ಧರ್ಮ ಎಂದೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನ ಸತ್ಯಸಂಧರಾದ ಸಂದೇಶವಾಹಕರು ಎಂದೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನಿಂದ ನಿಯೋಗಿತರಾದವರು ಎಂದೂ. (ಅಲ್ ಮುಸ್ಲಿಹ್ ಮೌಊದ್[ರ])**

**ಮುಸ್ಲಿಹ್ ಮೌಊದ್ ಭವಿಷ್ಯವಾಣಿ ಕುರಿತು ಕೆಲವು ಆಕ್ಷೇಪಗಳ ಉತ್ತರಗಳು**

**ಹಝ್ರತ್ ಮುಸ್ಲಿಹ್ ಮೌಊದ್[ರ] ಅವರ ಗ್ರಂಥಗಳು, ಉಪನ್ಯಾಸಗಳು ಹಾಗೂ ಭಾಷಣಗಳ ಸಂಪುಟ "ಅನ್ವಾರುಲ್ ಉಲೂಮ್"ನನ್ನು ಓದುವ ಯೋಜನೆ**

**"ಲೌಕಿಕ ಹಾಗೂ ಆಂತರಿಕ ಜ್ಞಾನದಿಂದ ಪರಿಪೂರ್ಣನಾಗಿರುವನು" ಎಂಬ ವಿಷಯದಡಿ ಹಝ್ರತ್ ಮುಸ್ಲಿಹ್ ಮೌಊದ್(ರ)ರವರ ಸಾಹಿತ್ಯಿಕ ಸಾಧನೆಗಳ ಸಂಕ್ಷಿಪ್ತ ಪ್ರಸ್ತಾವನೆ**

**ಮಲಿಕ್ ಉಮರ್ ಸಾಹೆಬ್ ಖೋಕರ್ ಮಾಜಿ ಅಮೀರ್ ಮುಲ್ತಾನ್ ಅವರ ಧರ್ಮಪತ್ನಿಯಾದ ದಿವಂಗತ ಮರಿಯಮ್ ಎಲಿಝುಬೆತ್ ಹಾಗೂ ಜಾಹಿದ್ ಫಾರಿಸ್ ಅಹ್ಮದ್ (ವಖ್‌ಫೆ ನೌ) ಇವರಿಬ್ಬರು ಮೃತರ ಉತ್ತಮ ಗುಣಲಕ್ಷಣಗಳ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫತೂಹ್'** ಮಸೀದಿಯಲ್ಲಿ 21-02-2020 ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಅಹ್ಮದಿಯಾ ಜಮಾಅತ್ ಫೆಬ್ರವರಿ ದಿನಾಂಕ 20 ಮುಸ್ಲಿಹ್ ಮೌಊದ್ ಭವಿಷ್ಯವಾಣಿಯ ದಿನವೆಂದು ವಿಶಿಷ್ಟವಾಗಿ ನೆನಪಿಸಿ ಯೌಮೆ ಮುಸ್ಲಿಹ್ ಮೌಊದ್‌ಗೆ ಸಂಬಂಧಿಸಿ ಜಲ್ಸಗಳನ್ನು ಜರಗಿಸುತ್ತದೆ. ಇದಕ್ಕು ಮುಂಚೆ ಅನೇಕ ಬಾರಿ ನಾನು ವಿವರಿಸಿದ್ದೇನೆ ಯೌಮೆ ಮುಸ್ಲಿಮ್ ಮೌಊದ್ ದಿನಾಚರಣೆ ಮಾಡುವುದು ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹುರವರ ಜನ್ಮ ದಿನವನ್ನು ನೆನಪಿಸುವುದಕ್ಕೋಸ್ಕರವಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರಕಟಿಸಿದ ಒಂದು ಭವಿಷ್ಯವಾಣಿ ಈಡೇರಿದುದನ್ನು ನೆನಪಿಸಲು ಈ ದಿನಾಚರಣೆ ಮಾಡಲಾಗುತ್ತಿದೆ. ಇಸ್ಲಾಮಿನ ಶ್ರೇಷ್ಠತೆ ಮತ್ತು ಸತ್ಯತೆಯನ್ನು ಸಾಬೀತುಗೊಳಿಸಲು ಅಲ್ಲಾಹನು ಇಲ್‌ಹಾಮ್ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವತೀರ್ಣಗೊಳಿಸಿದ ಭವಿಷ್ಯವಾಣಿಯನ್ನು ಅವರು ಪ್ರಕಟಿಸಿದ್ದರು. ಹಝ್ರತ್ ಮುಸ್ಲಿಹ್ ಮೌಊದ್[ರ] ಜನಿಸುವುದಕ್ಕೆ ಮೂರು ವರ್ಷ ಮೊದಲು ಈ ಭವಿಷ್ಯವಾಣಿ ಪ್ರಕಟಗೊಳಿಸಲಾಗಿತ್ತು. ಇಸ್ಲಾಮ್‌ಗೆ ಸೇವೆ ಸಲ್ಲಿಸುವ ಒಬ್ಬ ವಾಗ್ದತ್ತ ಪುತ್ರ ಜನಿಸುವ ಬಗ್ಗೆ ಆ ಭವಿಷ್ಯವಾಣಿಯಲ್ಲಿ ತಿಳಿಸಲಾಗಿತ್ತು. ಅದನ್ನು ಶತ್ರುಗಳಿಗೆ ದೃಷ್ಟಾಂತವಾಗಿ ಪ್ರಕಟಿಸಲಾಗಿತ್ತು. ಆದ್ದರಿಂದ ನಿನ್ನೆ 20 ಫೆಬ್ರವರಿಗೆ ಈ ಭವಿಷ್ಯವಾಣಿಗೆ 134 ವರ್ಷ ಕಳೆದಿದೆ ಹೀಗೆ ಇದು 100 ವರ್ಷಕ್ಕಿಂತ ಹೆಚ್ಚು ಕಾಲದಿಂದ ಪ್ರಜ್ವಲಿಸುತ್ತಿರುವ ಒಂದು ಕುರುಹು ಆಗಿದೆ. ನಾನು ಹೇಳಿದ ಹಾಗೆ ಜಮಾಅತ್‌ಗಳಲ್ಲಿ ಜಲ್ಸಗಳು ಆಯೋಜಿಸುತ್ತಿದ್ದಾರೆ ಮತ್ತು ಅದರಲ್ಲಿ ಆ ಭವಿಷ್ಯವಾಣಿಯಲ್ಲಿ ಹೇಳಿರುವಂತಹ ಕೆಲವು ಅಂಶಗಳನ್ನು ವಿವರಿಸಲಾಗುತ್ತದೆ. ಆದರೆ ಒಂದೆರಡು ಗಂಟೆಗಳ ಜಲ್ಸಗಳಲ್ಲಿ ಎಲ್ಲಾ ಅಂಶಗಳನ್ನು ಮತ್ತು ಅದರ ಮಹತ್ವವನ್ನು ವಿವರಿಸಲು ಸಾಧ್ಯವಿಲ್ಲ. ಹೀಗೆ ಒಂದು ಜಲ್ಸದಲ್ಲಿ ಇದನ್ನು ಸಂಪೂರ್ಣವಾಗಿ ವಿವರಿಸಲು ಸಾಧ್ಯವಾಗದಿದ್ದರೆ ಒಂದು ಖುತ್‌ಬದಲ್ಲಿ ಅದರ ಅನೇಕ ಅಂಶಗಳನ್ನು ವಿವರಿಸಲು ಸಾಧ್ಯವಿಲ್ಲ. ಆದ್ದರಿಂದ ನಾನು ಈ ಭವಿಷ್ಯವಾಣಿಗೆ ಸಂಬಂಧಿಸಿದ ಕೆಲವು ಅಂಶಗಳನ್ನು ಈ ಖುತ್‌ಬದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್[ರ] ಅವರ ಶಬ್ದಗಳಲ್ಲಿಯೇ ವಿವರಿಸುವೆನು. ಈ ಭವಿಷ್ಯವಾಣಿಯ ವೈಶಾಲ್ಯ ಮತ್ತು ವೈಭವದ ಬಗ್ಗೆ ಸ್ವಲ್ಪ ಮಟ್ಟಿಗೆ ಅಂದಾಜನ್ನು ಆ ಉಲ್ಲೇಖಗಳಿಂದ ಮಾಡಬಹುದಾಗಿದೆ. ಹಝ್ರತ್ ಮುಸ್ಲೆಹ್ ಮೌಊದ್[ರ] ಅವರು ವಿವರಿಸಿರುವುದನ್ನು ಓದಲು ಮತ್ತು ಅದನ್ನು ಕೇಳಲು ಬಹಳ ಅನಂದವನ್ನುಂಟಾಗುತ್ತದೆ. ಏನೇ ಇರಲಿ ಈ ಉಲ್ಲೇಖಗಳಿಂದ ನಾವು ಅದರ ಮಹತ್ವ ಎಂತಹದ್ದು ಎಂದು ತಿಳಿಯಲು ಸಾದ್ಯವಾಗುತ್ತದೆ ಮತ್ತು ಈ ಭವಿಷ್ಯವಾಣಿ ಹೇಗೆ ಹಝ್ರತ್ ಮಸೀಹ್ ಮೌಊದ್[ಅ] ಅವರಿಗೆ ಜನಿಸಿದ ಪುತ್ರನಲ್ಲಿ ಪೂರ್ಣಗೊಂಡಿತು ಎಂದು ತಿಳಿದು ಬರುತ್ತದೆ.

ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸಲಾಮ್ ಅವರು ನುಡಿದ ಭವಿಷ್ಯವಾಣಿಯ ಪದಗಳನ್ನು ವಿವರಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಮ್ಮ ಭವಿಷ್ಯವಾಣಿಯನ್ನು ವಿವರಿಸುತ್ತ ವಿರೋಧಿಗಳಿಗೆ ಹೇಳುತ್ತಾರೆ:

"ಮೊದಲನೆಯ ಭವಿಷ್ಯವಾಣಿ **ಬಇಲ್ಹಾಮಿಲ್ಲಾಹಿ ತಆಲಾ ವ ಇಲಾಮಿಹೀ ಅಝ್ಝವಜಲ್ಲ** ಕರುಣಾಮಯಿ ಹಾಗೂ ಗೌರವಾನ್ವಿತ ಹಾಗೂ ಶ್ರೇಷ್ಠ ಮತ್ತು ಎಲ್ಲಾ ವಿಷಯಗಳಲ್ಲಿಯು ಬಲಿಷ್ಠನಾದ ಅಲ್ಲಾಹನು (**ಜಲ್ಲ ಶನುಹೂ ವ ಅಝ್ಝ ಇಸ್‌ಮುಹೂ**) ನನಗೆ ತನ್ನ ದಿವ್ಯವಾಣಿಯ ಮೂಲಕ ಸಂಬೋಧಿಸಿ ಹೀಗೆ ನುಡಿದಿದ್ದಾನೆ: ನಾನು ನಿನಗೆ ನನ್ನೊಂದಿಗೆ ಬೇಡಿಕೊಂಡ ಹಾಗೆ ಒಂದು ಕರುಣೆಯ ಕುರುಹು ನೀಡುವೆನು. ನಾನು ನಿನ್ನ ವಿನಮ್ರತೆಯ ಪ್ರಾರ್ಥನೆಗಳನ್ನು (**ತಝುರ್‍ರುಆತ್**) ಆಲಿಸಿ ತನ್ನ ಅನುಗ್ರಹದೊಂದಿಗೆ ಸ್ವೀಕೃತಿ ನೀಡಿದೆನು ಮತ್ತು ನಿನ್ನ ಪ್ರಯಾಣವನ್ನು (ಹೊಶ್ಯಾರ್‌ಪುರ ಮತ್ತು ಲುಧ್ಯಾನದ ಪ್ರವಾಸ) ನಿನಗಾಗಿ ಶುಭಕರಗೊಳಿಸಿರುವೆನು. ಆದ್ದರಿಂದ ದೈವಶಕ್ತಿಯ ಮತ್ತು ಕರುಣೆ ಹಾಗೂ ಸಾಮಿಪ್ಯದ ಕುರುಹು ನಿನಗೆ ನೀಡಲಾಗುತ್ತಿದೆ. ಅನುಗ್ರಹ ಮತ್ತು ಉಪಕಾರದ ಕುರುಹು ನಿನಗೆ ನೀಡಲಾಗುತ್ತಿದೆ ಮತ್ತು ಗೆಲುವು(ಫತಹ್) ಹಾಗೂ ಸಫಲತೆಯ(ಝುಫರ್) ಕೀಲಿಗೈ ನಿನಗೆ ಸಿಗುತ್ತಿದೆ. ಎಲೈ ಮುಝುಫ್ಫರ್! ನಿನ್ನ ಮೇಲೆ ಶಾಂತಿ ಇರಲಿ. ಅಲ್ಲಾಹನು ಹೀಗೆ ಹೇಳಲು ಕಾರಣ ಜೀವಿಸಲು ಬಯಸುವರು ಮೃತ್ಯುವಿನ ದವಡೆಯಿಂದ ಮುಕ್ತಿ ಪಡೆಯಲಿ ಮತ್ತು ಗೋರಿಗಳಲ್ಲಿ ಹೂತಲ್ಪಟ್ಟವರು ಹೊರ ಬರಲಿ ಮತ್ತು ಇಸ್ಲಾಮ್ ಧರ್ಮದ ಗೌರವ ಮತ್ತು ಅಲ್ಲಾಹನ ದಿವ್ಯವಾಣಿಗಳ (ಪವಿತ್ರ ಖುರ್‌ಆನ್) ಪದವಿ ಜನರ ಮೇಲೆ ಸ್ಪಷ್ಟವಾಗಲಿ. ಹೀಗೆ ಸತ್ಯವು ತನ್ನ ಎಲ್ಲ ಅನುಗ್ರಹಗಳೊಂದಿಗೆ ಬರುವಂತಾಗಲಿ ಹಾಗೂ ಮಿಥ್ಯವೂ ತನ್ನ ಎಲ್ಲಾ ಅಪಶಕುನದೊಂದಿಗೆ ಪಲಾಯನ ಮಾಡಲಿ. ಹೀಗೆ ಜನರು ತಿಳಿಯುವರು ನಾನು ಎಲ್ಲಾ ಕಾರ್ಯಗಳಲ್ಲೂ ಸರ್ವ ಸಮರ್ಥನಾಗಿದ್ದೇನೆ (ಖಾದಿರ್). ನಾನು ಬಯಸಿದನ್ನೆಲ್ಲ ಮಾಡಬಲ್ಲೆನು ಮತ್ತು ನಾನು ನಿನ್ನೊಂದಿಗಿದ್ದೇನೆ ಎಂದು ಅವರಿಗೆ ಮನವರಿಕೆ ಆಗಲಿ ಮತ್ತು ಯಾರು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವರೊ, ಅಲ್ಲಾಹ್ ಮತ್ತು ಅಲ್ಲಾಹನ ಧರ್ಮ, ಅವನ ಗ್ರಂಥ ಮತ್ತು ಅವನ ಪ್ರವಾದಿ ಆದ ರಸೂಲ್ ಸಲಲ್ಲಾಹು ಅಲೈಹಿವಸಲ್ಲಮರನ್ನು ನಿರಾಕರಿಸುತ್ತಾರೆ ಮತ್ತು ಧಿಕ್ಕರಿಸುವ ದೃಷ್ಟಿಯಿಂದ ನೋಡುವರೋ ಅವರಿಗಾಗಿ ಒಂದು ಸ್ಪಷ್ಟವಾದ ಮಾರ್ಗ ದೊರೆಯುವಂತಾಗಲಿ ಮತ್ತು ಅಪರಾಧಿಗಳ ಮಾರ್ಗವು ಬಹಿರಂಗವಾಗಲಿ.

ಆದ್ದರಿಂದ ನಿನಗೆ ಶುಭವಾರ್ತೆ ಇದೆ. ಓರ್ವ ಗೌರವಾನ್ವಿತ ಹಾಗೂ ಪರಿಶುದ್ಧ ಬಾಲಕ ನಿನಗೆ ನೀಡಲಾಗುವುದು. ಓರ್ವ ಪವಿತ್ರ ದಾಸ (ಬಾಲಕ) ನಿನಗೆ ದಯಪಾಲಿಸಲಾಗುವುದು. ಆ ಬಾಲಕನು ನಿನ್ನ ಅಂಶದಿಂದಲೇ (ಬೀಜ) ನಿನ್ನ ವಂಶ ಹಾಗೂ ಜನಾಂಗದಿಂದಾಗುವುದು. ಸುಂದರವಾದ ಮತ್ತು ಪವಿತ್ರ ಬಾಲಕ ನಿಮ್ಮ ಅತಿಥಿಯಾಗಿ ಬರುವನು ಅವನ ಹೆಸರು **ಅನ್‌ಮವಾಯೀಲ್** ಮತ್ತು ಬಶೀರ್ ಸಹ ಆಗಿರುವುದು. ಅವನಿಗೆ ಪರಿಶುದ್ಧ ಆತ್ಮ ನೀಡಲಾಗಿದೆ ಮತ್ತು ಅವನು ಕೊಳಕಿನಿಂದ ಪರಿಶುದ್ಧನಾಗಿದ್ದಾನೆ. ಅವನು ಅಲ್ಲಾಹನ ಪ್ರಕಾಶ ಆಗಿದ್ದಾನೆ. ಆ ಸೌಭಾಗ್ಯನು ಆಕಾಶದಿಂದ ಬರುವನು. ಅಲ್ಲಾಹನ ಕೃಪೆ ಅವನೊಂದಿಗೆ ಇದೆ ಅದು ಅವನೊಂದಿಗೆ ಬರುವುದು. ಅವನ ವ್ಯಕ್ತಿತ್ವವು ಅದ್ಭುತ, ಶ್ರೇಷ್ಠ ಹಾಗೂ ಸಂಪತ್ಭರಿತವಾಗಿರುತ್ತದೆ. ಅವನು ಲೋಕಕ್ಕೆ ಪಾದರ್ಪಣೆ ಮಾಡುವನು ಮತ್ತು ತನ್ನ ಮಸೀಹನ ಆತ್ಮದೊಂದಿಗೆ ಮತ್ತು **'ರೂಹುಲ್‌ಹಖ್ಖಿನೊಂದಿಗೆ'** ಜಿಬ್ರೀಲ್‌ನ ಅನುಗ್ರಹಗಳಿಂದ ಹಲವರನ್ನು ರೋಗಗಳಿಂದ ಮುಕ್ತಗೊಳಿಸುವನು. ಅವನು **'ಕಲಿಮತುಲ್ಲಾಹ್'** ಅಲ್ಲಾಹನ ದಿವ್ಯವಾಣಿ ಆಗಿದ್ದಾನೆ ಏಕೆಂದರೆ ಅಲ್ಲಾಹನ ಕರುಣೆ ಮತ್ತು ಮಹಾ ಸ್ವಾಭಿಮಾನವು ಅವನನ್ನು **ಕಲಿಮ ತಮ್‌ಜೀದಿನ** ಪವಿತ್ರ ಆತ್ಮದೊಂದಿಗೆ ಕಳುಹಿಸಿದ್ದಾನೆ. ಅವನು ಅತ್ಯಂತ ಬುದ್ಧಿವಂತನೂ ಮತ್ತು ವಿವೇಕಶಾಲಿಯು ಆಗಿರುವನು ಮತ್ತು ಹೃದಯ ವೈಶಾಲ್ಯ ಹೊಂದಿರುವನು, ಲೌಕಿಕ ಹಾಗೂ ಆಂತರಿಕ ಜ್ಞಾನದಿಂದ ಪರಿಪೂರ್ಣನಾಗಿರುವನು. ಅವನು ಮೂರನ್ನು ನಾಲ್ಕು ಮಾಡುವನಾಗಿರುವನು (ಇದರ ಅರ್ಥ ತಿಳಿದುಬಂದಿಲ್ಲ) ದೊಶುಂಬ (ಸೋಮವಾರ) ಶುಭಕರ ದೋಶುಂಬ (ಸೋಮವಾರ) ವಾಗಿದೆ. ಆತ್ಮೀಯ ಮಗು ಪ್ರೀಯ ಮಗು **ಮಝ್‌ಹರುಲ್ ಅವ್ವಲಿ ವಲ್ ಆಖಿರೆ– ಮಝ್‌ಹರುಲ್ ಹಖ್ಖೆ ವಲ್‌ಅಲಾಎ– ಕಅನ್ನಲ್ಲಹ ನಝುಲ ಮಿನಸ್ಸವಾಯಿ**. ಅವನ ಆಗಮನವೂ ಬಹಳ ಅನುಗ್ರಹದಾಯಕವಾಗಿದೆ ಮತ್ತು ಅಲ್ಲಾಹನ ಪ್ರತಾಪ ಕಾಣಲು ಕಾರಣವಾಗಿದೆ. ಪ್ರಕಾಶವು ಆಗಮಿಸುತ್ತದೆ ಪ್ರಕಾಶವ ನೋಡಿರಿ. ಅವನನ್ನು ಅಲ್ಲಾಹನು ತನ್ನ ಸಂಪ್ರೀತಿಯ ಸುಗಂಧದಿಂದ ಸಮ್ಮಿಲಿತಗೊಳಿಸಿದ್ದಾನೆ. ನಾವು ಅವನಲ್ಲಿ ತನ್ನ ಆತ್ಮವನ್ನು ಹಾಕುವೆನು, ಅಲ್ಲಾಹನ ನೆರಳು ಅವನ ಶಿರದ ಮೇಲೆ ಇರುವುದು. ಅವನು ಅತಿ ಅತಿ ವೇಗವಾಗಿ ಬೆಳೆಯುವನು ಮತ್ತು ಕೈದಿಗಳನ್ನು ಬಿಡುಗಡೆಗೊಳಿಸಲು ಕಾರಣವಾಗುವನು ಮತ್ತು ಭೂಮಿಯ ಅಂಚುಗಳವರೆಗೆ ಖ್ಯಾತಿ ಪಡೆಯುವನು ಹಾಗೂ ಜನಾಂಗಗಳು ಇವನಿಂದ ಅನುಗ್ರಹ ಪಡೆಯುವರು. ಆಗ ತನ್ನ ಆತ್ಮ ಆಕಾಶದೆಡೆ ಎತ್ತಲ್ಪಡುವುದು **ವಕಾನ ಅಮ್‌ರಮ್ಮಖ್ಝೀಯ.**"

**(ಮಜ್‌ಮೂಆ ಇಶ್ತಿಹಾರಾತ್, ಸಂಪುಟ–1, ಪುಟ–100, ಇಶ್ತಿಹಾರ್ 20 ಫೆಬ್ರವರಿ 1886)**

ಇದು ಭವಿಷ್ಯವಾಣಿಯ ಪದಗಳಾಗಿವೆ ಇದರಲ್ಲಿ ಆ ವಾಗ್ದಾತ್ತ ಪುತ್ರನ ಅನೇಕ ವಿಷೇಶ ಗುಣಗಳನ್ನು ಪ್ರಸ್ತಾಪಿಸಲಾಗಿದೆ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅಲ್ಲಾಹನಂದ ದೃಷ್ಟಾಂತವನ್ನು ಪಡೆಯಲು ನಲವತ್ತು ದಿನಗಳ ಕಾಲ ಅವನ ಆಸ್ಥಾನದಲ್ಲಿ ಇದ್ದು ಬೇಡಿಕೊಂಡರು ಅದರ ಫಲವಾಗಿ ಅಲ್ಲಾಹನು ನುಡಿದಿದ್ದ ಭವಿಷ್ಯವಾಣಿಯನ್ನು ನಮ್ಮ ಮುಂದೆ ಪ್ರಸ್ತಾಪಿಸಿದ್ದೇನೆ. ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇಂದಿನಂದ 58 ವರ್ಷಗಳ ಮುಂಚೆ (ಹಝ್‌ರತ್ ಮುಸ್ಲಿಹ್ ಮೌಊದ್(ರ) ಇದನ್ನು ಪ್ರಸ್ತಾಪಿಸುತ್ತಿರುವಾಗ ಈ ಭವಿಷ್ಯವಾಣಿಗೆ 58 ವರ್ಷವಾಗಿತ್ತು) 1886 ಫೆಬ್ರವರಿ 20ರಂದು ಹೋಶಿಯಾರ್‌ಪುರ್ ಎಂಬ ಈ ನಗರದಲ್ಲಿ (ಈ ಖುತ್‌ಬ ಅವರು ಹೋಶಿಯಾರ್‌ಪುರದಲ್ಲಿ ನೀಡಿದರು) ಈ ಕಟ್ಟಡದಲ್ಲಿ (ತಾವು ನಂತಿರುವ ಜಾಗದಲ್ಲಿ ಕೈಸಂಜ್ಞೆ ಮಾಡಿದರು) ನನ್ನ ಮುಂದಿರುವ ಜಾಗವಿದೆ ಇದನ್ನು ತವೇಲ ಎಂದು ಕರೆಯಲ್ಪಡುತ್ತಿತ್ತು. ತವೇಲ ಎಂದರೆ ವಾಸದ ಮನೆಯಲ್ಲ. ಅದು ಒಬ್ಬ ಶ್ರೀಮಂತ ವ್ಯಕ್ತಿಯ ಹಲವು ಕಟ್ಟಡಗಳಲ್ಲಿ ಒಂದಾಗಿತ್ತು. ಅದರಲ್ಲಿ ಯಾವಾಗಲಾದರೊಮ್ಮೆ ಅತಿಥಿಗಳು ವಾಸಿಸಿರಬಹುದು. ಅದು ಸಾಮಗ್ರಿಗಳ ಸಂಗ್ರಹಾಲಯವಾಗಿಯೂ ಉಪಯೋಗಿಸಿರಬಹುದು. ಆವಶ್ಯವಿದ್ದಾಗ ಮನೆಯ ಸಾಕು ಪ್ರಾಣಿಗಳನ್ನು ಸಹ ಅಲ್ಲಿರಿಸಿರಬಹುದು. ಅದೊಂದು ಹೆಚ್ಚುವರಿ ಕಟ್ಟಡವಾಗಿತ್ತು. ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಖಾದಿಯಾನಿನ ಒಬ್ಬ ಅಜ್ಞಾತ ವ್ಯಕ್ತಿ. ಆ ವ್ಯಕ್ತಿಯನ್ನು ಖಾದಿಯಾನಿನ ಜನರು ಸಹ ಪೂರ್ಣವಾಗಿ ಪರಿಚಯ ಹೊಂದಿರಲಿಲ್ಲ. ಆ ವ್ಯಕ್ತಿ ಜನರು ಇಸ್ಲಾಮ್ ಮತ್ತು ಇಸ್ಲಾಮಿನ ಸ್ಥಾಪಕರ ವಿರುದ್ಧ ಹೊಂದಿದ್ದ ವಿರೋಧವನ್ನು ನೋಡಿ ನೊಂದುಕೊಂಡು ತನ್ನ ಪ್ರಭುವಾದ ಅಲ್ಲಾಹನ ಸನ್ನಿಧಿಯಲ್ಲಿ ಏಕಾಂತವಾಗಿ ಆರಾಧನೆ ಮಾಡಲು ಮತ್ತು ಅವನಿಂದ ಸಹಾಯ ಮತ್ತು ಬೆಂಬಲದ ದೃಷ್ಟಾಂತ ಬೇಡಿಕೊಳ್ಳಲು ಹೋಶಿಯಾರ್‌ಪುರಕ್ಕೆ ಆಗಮಿಸಿದರು. ನಲ್ವತ್ತು ದಿನಗಳ ಕಾಲ ಜನರಿಂದ ದೂರವಿದ್ದುಕೊಂಡು ತನ್ನ ದೇವನಗೆ ಪ್ರಾರ್ಥನೆ ಸಲ್ಲಿಸಿದರು. ನಲ್ವತ್ತು ದಿನಗಳ ಪ್ರಾರ್ಥನೆಯ ನಂತರ ಅಲ್ಲಾಹನು ಆ ವ್ಯಕ್ತಿಗೆ ಒಂದು ದೃಷ್ಟಾಂತವನ್ನು ಪ್ರಕಟಿಸಿದನು. ಆ ದೃಷ್ಟಾಂತ ಇದಾಗಿತ್ತು. ನಾನು ನಿನಗೆ ವಾಗ್ದಾನ ಮಾಡಿದವುಗಳನ್ನೆಲ್ಲಾ ಈಡೇರಿಸುವೆನು. ನಿನ್ನ ಹೆಸರು ಲೋಕದ ಅಂಚುಗಳ ತನಕ ತಲಪಿಸುವೆನು. ಈ ವಾಗ್ದಾನಗಳನ್ನು ಹೆಚ್ಚಿನ ವೈಭವದೊಂದಿಗೆ ಈಡೇರಿಸಲು ನಿನಗೊಬ್ಬ ಪುತ್ರನನ್ನು ನೀಡುವೆನು. ಆ ಪುತ್ರ ಕೆಲವು ವೈಶಿಷ್ಟ್ಯಪೂರ್ಣ ಗುಣಗಳನ್ನು ಹೊಂದುವನು. ಅವನು ಇಸ್ಲಾಮನ್ನು ಲೋಕದ ಎಲ್ಲೆಗಳ ತನಕ ಹಬ್ಬಿಸುವನು. ಕರುಣೆ ಮತ್ತು ಅನುಗ್ರಹದ ಒಂದು ದೃಷ್ಟಾಂತವಾಗುವುದು ಮತ್ತು ಅವನು ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನವನ್ನು ಇಸ್ಲಾಮಿನ ಪ್ರಚಾರದಲ್ಲಿ ಅವಶ್ಯವಿರುವುದನ್ನು ಅವನಿಗೆ ನೀಡಲಾಗುವುದು. ಅದೇ ರೀತಿ ಅಲ್ಲಾಹನು ಅವನಿಗೆ ಸುದೀರ್ಘ ಆಯಸ್ಸನ್ನು ನೀಡುವನು ಎಲ್ಲಿಯ ತನಕ ಎಂದರೆ ಅವನು ಲೋಕದ ಎಲ್ಲೆಗಳ ತನಕ ಪ್ರಸಿದ್ಧಿಗಳಿಸುವನು." (ಇಂದು ಲೋಕದಲ್ಲಿ ಎಲ್ಲೆಲ್ಲಿ ಜಮಾಅತ್ ಸ್ಥಾಪನೆಗೊಂಡಿದೆಯೋ ಅಲ್ಲೆಲ್ಲ ಈ ಭವಿಷ್ಯವಾಣಿಯು ಪ್ರಸಿದ್ಧಿ ಹೊಂದುತ್ತಿದೆ ಮತ್ತು ಮಹಾನ್ ಪುತ್ರನ ಪ್ರಸಿದ್ಧಿ ಆಗಿದೆ. ದಾವ ಮುಸ್ಲಿಹ್ ಮೌಊದ್(ರ) ಕೆ ಮುತಲ್ಲಕ್ ಪುರ್ ಶೌಕತ್ ಏಲಾನ್, ಅನ್ವಾರುಲ್ ಉಲೂಮ್, ಸಂಪುಟ–17, ಪುಟ–146–147)

ಈ ಭವಿಷ್ಯವಾಣಿ ಅಡಕವಾದ ವಿಜ್ಞಾಪನೆ ಪತ್ರ ಪ್ರಕಟಿಸಿದಾಗ ಜನರು ಆಕ್ಷೇಪಗಳ ಸರಣಿಯನ್ನು ಪ್ರಾರಂಭಿಸಿದರು. ಇಂತಹ ಭವಿಷ್ಯವಾಣಿಯ ಮಹತ್ವವೇನು? ನನಗೆ ಒಬ್ಬ ಪುತ್ರ ಜನಸುವನು ಎಂಬ ಭವಿಷ್ಯವಾಣಿ ಮಹತ್ವಪೂರ್ಣವಲ್ಲ. ಯಾರು ಬೇಕಾದರು ಇಂತಹ ಭವಿಷ್ಯವಾಣಿಯನ್ನು ಮಾಡಬಹುದು. ಇದಕ್ಕೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಉತ್ತರವನ್ನು ನೀಡಿದ್ದಾರೆ ಅದನ್ನು ಪ್ರಸ್ತಾಪಿಸುತ್ತ ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಈ ಭವಿಷ್ಯವಾಣಿ ಪ್ರಕಟಿಸಿದಾಗ ವಿರೋಧಿಗಳು ಆಕ್ಷೇಪಗಳ ಸರಣಿಯನ್ನು ಪ್ರಾರಂಭಿಸಿದರು. ಆಗ 22 ಮಾರ್ಚ್ 1886ರಂದು ಹಝ್‌ರತ್ ಮಸೀಹ್ ಮೌಊದ್(ಅ) ಅವರು ಇನ್ನೊಂದು ವಿಜ್ಞಾಪನೆ ಪತ್ರವನ್ನು ಪ್ರಕಟಿಸಿದರು. ವಿರೋಧಿಗಳು ಹೀಗೆ ಆಕ್ಷೇಪಿಸಿದರು ಇಂತಹ ಭವಿಷ್ಯವಾಣಿಯ ಮಹತ್ವವೇನು? ನನಗೆ ಒಬ್ಬ ಪುತ್ರ ಜನಿಸುವನು ಎಂಬ ಭವಿಷ್ಯವಾಣಿ ಮಹತ್ವಪೂರ್ಣವಲ್ಲ. ಏನು, ಯಾವಾಗಲೂ ಜನರಿಗೆ ಪುತ್ರರು ಜನಿಸುತ್ತಾ ಇರುವುದಿಲ್ಲವೇ? ಅಪರೂಪವಾಗಿ ಯಾವುದಾದರು ಓರ್ವ ವ್ಯಕ್ತಿಯನ್ನು ಗಂಡುಮಗು ಜನಿಸುವುದಿಲ್ಲ ಅಥವಾ ಅವನಲ್ಲಿ ಕೇವಲ ಹೆಣ್ಣು ಮಕ್ಕಳೇ ಜನಿಸಬಹುದು. ಸಾಮಾನ್ಯವಾಗಿ ಜನರಿಗೆ ಗಂಡು ಮಕ್ಕಳು ಜನಿಸುತ್ತವೆ. ಹೀಗೆ ಅವರ ಜನನಕ್ಕೆ ವಿಷೇಶ ದೃಷ್ಟಾಂತ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಹೀಗೆ ನಿಮ್ಮ ಮನೆಯಲ್ಲಿಯು ಸಹ ಓರ್ವ ಪುತ್ರ ಜನಿಸಿದರೆ ಇದು ಅಲ್ಲಾಹನ ವಿಶೇಷ ಭವಿಷ್ಯವಾಣಿಯ ಪ್ರಕಾರ ಜನಿಸಿರುವುದು ಎನ್ನಲು ಏಕೆ ಸಾಧ್ಯ? ಇದಕ್ಕೆ ಹಝ್‌ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಅವರು 22 ಮಾರ್ಚ್‌ನ ವಿಜ್ಞಾಪನೆ ಪತ್ರದಲ್ಲಿ ಹೇಳುತ್ತಾರೆ: "ಇದು ಕೇವಲ ಭವಿಷ್ಯವಾಣಿಯಲ್ಲ ಬದಲಿಗೆ ಒಂದು ಬೃಹತ್ತಾದ ಆಕಾಶದ ದೃಷ್ಟಾಂತ ಆಗಿದೆ ಇದನ್ನು ಅಲ್ಲಾಹನು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸತ್ಯತೆಗೆ ಸಾಕ್ಷಿಯನ್ನಾಗಿ ವ್ಯಕ್ತ ಪಡಿಸಿದ್ದಾನೆ." ಅನಂತರ ಅದೇ ಪತ್ರದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **ಬಫಝ್‌ಲಿಹೀ ಇಲಾಹಿ ತಅಲಾ ಡ ಇಹ್‌ಸಾನಿಹೀ ವಬಿಬರಕತಿ** ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅಲ್ಲಾಹನು ಈ ದಾಸನ ವಿನಮ್ರ ಪೂರ್ವ ಪ್ರಾರ್ಥನೆಗಳನ್ನು ಸ್ವೀಕರಿಸಿ ಇಂತಹ ಅನುಗ್ರಹದಾಯಕ ಆತ್ಮವನ್ನು ಕಳುಹಿಸಲು ವಾಗ್ದಾನ ಮಾಡಿದ್ದಾನೆ. ಅದರ ಬಾಹ್ಯ ಮತ್ತು ಆಂತರಿಕ ಅನುಗ್ರಹಗಳು ಇಡೀ ಭೂಮಿಯ ಮೇಲೆ ಹರಡುವುದು. ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನಗೊಬ್ಬ ಪುತ್ರ ಜನಿಸಲಿರುವನು ಎಂದು ಮಾತ್ರ ಹೇಳಿದ್ದರೂ ಕೂಡ ಅದೊಂದು ಮಹತ್ವಪೂರ್ಣ ಭವಿಷ್ಯವಾಣಿ ಆಗುತ್ತಿತ್ತು. ಏಕೆಂದರೆ ಲೋಕದ ಜನರಲ್ಲಿ ಒಂದು ಭಾಗ – ಅವರ ಸಂಖ್ಯೆ ಅಲ್ಪವಾಗಿದ್ದರೂ – ಹೇಗಿದ್ದಾರೆಂದರೆ ಅವರಿಗೆ ಮಕ್ಕಳು ಜನಿಸುವುದೇ ಇಲ್ಲ. ಇನ್ನೊಂದು ವಿಷಯವೇನೆಂದರೆ ಅವರು ಈ ಭವಿಷ್ಯವಾಣಿ ಪ್ರಕಟಿಸಿದಾಗ ಅವರ ಪ್ರಾಯ 50 ವರ್ಷಕ್ಕಿಂತ ಹೆಚ್ಚಾಗಿತ್ತು. ಲೋಕದಲ್ಲಿ ಸಾವಿರಗಟ್ಟಲೆ ಜನರು ಹೇಗಿದ್ದಾರೆಂದರೆ ಅವರಿಗೆ ಐವತ್ತು ವರ್ಷ ಪ್ರಾಯ ದಾಟಿದ ನಂತರ ಮಕ್ಕಳು ಹುಟ್ಟುವುದೇ ಇಲ್ಲ. ಅದೂ ಅಲ್ಲದೆ ಕೆಲವು ಜನರಿಗೆ ಹೆಣ್ಣು ಮಕ್ಕಳೇ ಜನಿಸುತ್ತಾರೆ. ಬೇರೆ ಕೆಲವರ ಸ್ಥಿತಿ ಹೇಗಿದೆ ಎಂದರೆ ಅವರಿಗೆ ಗಂಡು ಮಕ್ಕಳು ಜನಿಸಿದರೂ ಹುಟ್ಟಿದ ಸ್ವಲ್ಪ ಕಾಲದೊಳಗೆ ಮಗು ಮರಣ ಹೊಂದುತ್ತದೆ. ಈ ಎಲ್ಲಾ ಸಂಶಯಗಳು ಇಲ್ಲಿ ಇದ್ದುವು. ಆದುದರಿಂದ, ಮೊದಲನೆಯದಾಗಿ ತನಗೊಬ್ಬ ಪುತ್ರನು ಜನಿಸುವನೆಂದು ಮುಂಚಿತವಾಗಿ ಸಮಾಚಾರ ನೀಡುವುದು ಒಬ್ಬ ಮನುಷ್ಯನ ಶಕ್ತಿಗೆ ಸೇರಿದುದಾಗಿರುವುದಿಲ್ಲ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿನಯದಿಂದ ಈ ಆಕ್ಷೇಪವನ್ನು ಅಂಗೀಕರಿಸಿ ಹೇಳುತ್ತಾರೆ: ಒಬ್ಬ ಪುತ್ರನು ಜನಿಸುವ ಬಗ್ಗೆ ಸಮಾಚಾರ ನೀಡುವುದನ್ನು ಒಂದು ಭವಿಷ್ಯವಾಣಿ ಎಂದು ಹೇಳಲಾಗದು ಎಂದು ಒಪ್ಪಿಕೊಳ್ಳುವುದಾದರೂ ಇಲ್ಲಿರುವ ಪ್ರಶ್ನೆ

ಏನೆಂದರೆ ಒಬ್ಬ ಪುತ್ರ ಜನಿಸುವನೆಂದು ಮಾತ್ರ ಸಮಾಚಾರ ನಾನು ನೀಡಿಲ್ಲ. ನಾನು ಹೇಳಿರುವುದೇನೆಂದರೆ ಅಲ್ಲಾಹನು ನನ್ನ ಪ್ರಾರ್ಥನೆಗಳನ್ನು ಅಂಗೀಕರಿಸಿದನು. ಅವನು ಒಂದು ಅನುಗ್ರಹಭರಿತ ಆತ್ಮವನ್ನು ಕಳುಹಿಸುವ ವಾಗ್ದಾನ ಮಾಡಿದ್ದಾನೆ. ಆ ಆತ್ಮದ ಬಾಹ್ಯ ಮತ್ತು ಆಂತರಿಕ ಅನುಗ್ರಹಗಳು ಲೋಕದಾದ್ಯಂತ ಹರಡುವುವು ಎಂದಾಗಿತ್ತು. (ಅಲ್ ಮೌಊದ್, ಅನ್ವಾರುಲ್ ಉಲೂಮ್ ಸಂಪುಟ–17, ಪುಟ–529–530)

ನಾನು ಹೇಳಿದ ಹಾಗೆ ಇಂದು ಇಡೀ ಜಗತ್ತು ಆ ವಾಗ್ದಾನದ ಪುತ್ರನು ವಿಶ್ವದ ಅಂಚಿನ ವರೆಗೆ ಪ್ರಸಿದ್ಧಿ ಹೊಂದಿರುವ ಬಗ್ಗೆ ಸಾಕ್ಷಿಯಾಗಿದೆ. ಹಿಂದುಸ್ತಾನದಿಂದ ಹೊರಗೆ ಅಥವಾ ಖಾದಿಯಾನಿನಿಂದ ಹೊರಗಿರುವ ಮಿಶನ್‌ಗಳು ನಿಮ್ಮ ಸತ್ಯತೆಗೆ ಸಾಕ್ಷಿ ಆಗಿದೆ. ಅನೇಕ ಮಿಶನ್‌ಗಳು ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಕಾಲದಲ್ಲಿಯೇ ಸ್ಥಾಪಿತಗೊಳಿಸಲಾಗಿತ್ತು. ಆ ಸರಣಿಯೇ ಇಂದೂ ಸಹ ನಡೆಯುತ್ತಲೇ ಇದೆ.

ಕೆಲವರು ಹೀಗೆ ಆಕ್ಷೇಪ ಎಸಗುತ್ತಾರೆ: ಮುಸ್ಲಿಹ್ ಮೌಊದ್(ರ) ಅವರು ಮುಂದೆ ಯಾವುದಾದರು ಕಾಲದಲ್ಲಿ ಜನಿಸುವರು ನೂರು ವರ್ಷ, ಇನ್ನೂರು ವರ್ಷ ಅಥವಾ ಮುನ್ನೂರು ವರ್ಷಗಳ ನಂತರ ಎನ್ನುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಏಕೆ ಈ ದೃಷ್ಟಾಂತವನ್ನು ಅಲ್ಲಾಹನಂದ ಬೇಡಿಕೊಂಡರು ಮತ್ತು ಆ ದೃಷ್ಟಾಂತವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದಲ್ಲಿಯೇ ಏಕೆ ಪೂರ್ಣಗೊಳ್ಳ ಬೇಕಾಗಿತ್ತು ಎಂಬುದನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮುಂದಿನ ಸಂತಾನ ಪರಂಪರೆಯಲ್ಲಿ ಮುನ್ನೂರು ನಾನೂರು ವರ್ಷಗಳ ನಂತರ ಮುಸ್ಲಿಹ್ ಮೌಊದ್ ಜನಿಸುವರು, ಈಗಿನ ಕಾಲದಲ್ಲಿ ಅವರು ಆಗಮಿಸಲಾರರು ಎಂದು. ಹೀಗೆ ಹೇಳುವ ಜನರು ದೇವಭಯವನ್ನು ಹೊಂದಿ ಭವಿಷ್ಯವಾಣಿಯ ಶಬ್ದಗಳನ್ನು ನೋಡಿ ಚಿಂತಿಸುವುದಿಲ್ಲ. ಇಸ್ಲಾಮ್ ದೃಷ್ಟಾಂತ ತೋರಿಸುವ ಶಕ್ತಿಯನ್ನು ಹೊಂದಿಲ್ಲ ಎಂದು ಈಗ ಇಸ್ಲಾಮಿನ ವಿರುದ್ಧ ಆಕ್ಷೇಪ ಮಾಡಲಾಗುತ್ತಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪಂಡಿತ್ ಲೇಖ್‌ರಾಮ್ ಆಕ್ಷೇಪಿಸುತ್ತಿದ್ದರು, ಇಸ್ಲಾಮ್ ಸತ್ಯ ಧರ್ಮವಾಗಿದ್ದರೆ ದೃಷ್ಟಾಂತ ತೋರಿಸಲಿ ಎಂದು. ಇಂದರ್‌ಮನ್ ಹೀಗೆ ಆಕ್ಷೇಪಿಸುತ್ತಿದ್ದರು, ಇಸ್ಲಾಮ್ ಸತ್ಯ ಧರ್ಮವಾಗಿದ್ದರೆ ದೃಷ್ಟಾಂತ ತೋರಿಸಲ್ಪಡಲಿ ಎಂದು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸಿದರು. ಓ ಅಲ್ಲಾಹ್, ನೀನು ದೃಷ್ಟಾಂತಗಳನ್ನು ಪ್ರಕಟಪಡಿಸು. ಅವು ಹೇಗಿರಬೇಕೆಂದರೆ ದೃಷ್ಟಾಂತವನ್ನು ಆವಶ್ಯಪಡುವವರನ್ನು ಇಸ್ಲಾಮಿನ ವಿರುದ್ಧ ನಿರುತ್ತರರನ್ನಾಗಿ ಮಾಡಬೇಕು. ಆ ದೃಷ್ಟಾಂತ ಇಂದರ್‌ಮನ್ ಮುರಾದಾಬಾದಿ ಮೊದಲಾದವರನ್ನು ಇಸ್ಲಾಮ್ ವಿರುದ್ಧ ನಿಶ್ಶಬ್ದರನ್ನಾಗಿ ಮಾಡುವಂತಾಗಲಿ ಎಂದು ಪ್ರಾರ್ಥಿಸಿದ್ದರು. ಆದರೆ ಈಗಿನ ಈ ಆಕ್ಷೇಪಗಾರರು ನಮಗೆ ಹೇಳಿ ಕೊಡುತ್ತಿದ್ದಾರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನ ಸನ್ನಿಧಿಯಲ್ಲಿ ಆ ರೀತಿ ಪ್ರಾರ್ಥಿಸಿದಾಗ ಅಲ್ಲಾಹನು ಅವರಿಗೆ ತಿಳಿಸಿದನು – ಮುನ್ನೂರು ವರ್ಷಗಳ ನಂತರ ನಿನಗೊಬ್ಬ ಪುತ್ರನನ್ನು ನೀಡುವೆನು ಆ ಪುತ್ರ ಇಸ್ಲಾಮಿನ ಸತ್ಯತೆಗೆ ಒಂದು ದೃಷ್ಟಾಂತವಾಗುವನು ಎಂದು. ಈ ಜನರು ಹೇಳುವ ಮಾತು ಅಸಂಬದ್ಧವಲ್ಲ ಎಂದು ಹೇಳುವವರು ಯಾರಾದರೂ ಇದ್ದಾರೆಯೇ? "ಈ ಮಾತು ಹೇಗಿದೆ ಎಂದರೆ ಓರ್ವ ವ್ಯಕ್ತಿಗೆ ಬಹಳ ಬಾಯಾರಿಕೆ ಉಂಟಾದಾಗ ಅವನು ಅನ್ನೋರ್ವ ವ್ಯಕ್ತಿಯನ್ನು ನೀರು ಕುಡಿಸುವುದಾಗಿ ಕೇಳಿಕೊಂಡಾಗ ಆತನು ನೀನು ಹೆದರಬೇಡ ನಾನು ಅಮೇರಿಕಾದಿಂದ ಶರಬತ್ತಿನ ಅಂಶವನ್ನು ತರಿಸಿದ್ದೇನೆ ಅದು ಈ ವರ್ಷ ಕೊನೆಯಲ್ಲಿ ತಲುಪುತ್ತದೆ ಅದರಿಂದ ನಾನು ನಿನಗೆ ಮುಂದಿನ ವರ್ಷ ಶರಬತ್ತನ್ನು ತಯಾರಿಸಿ ಕುಡಿಸುವೆನು ಎಂದು ಹೇಳಿದರೆ. ಈ ಮಾತು ಹೇಳುವನು ಹುಚ್ಚ ಎಂದು ಹೇಳುತ್ತಾರೆ. ಯಾವ ಹುಚ್ಚ ವ್ಯಕ್ತಿಯು ಸಹ ಇಂತಹ ಮಾತನ್ನು ಹೇಳಲು ಸಾಧ್ಯವಿಲ್ಲ ಮತ್ತು ಯಾವ ವ್ಯಕ್ತಿಯು ಅಲ್ಲಾಹ್ ಮತ್ತು ಪ್ರವಾದಿ(ಸ) ಅವರಿಗೆ ಸಂಬಂಧಿಸಿ ಹೇಳುವುದಿಲ್ಲ. ಪಂಡಿತ್ ಲೇಖ್‌ರಾಮ್, ಮುನ್‌ಶೀ ಇಂದರ್‌ಮನ್ ಮುರಾದಾಬಾದಿ ಮತ್ತು ಖಾದಿಯಾನಿನ ಹಿಂದುಗಳು ಹೇಳುತ್ತಿದ್ದಾರೆ: ಇಸ್ಲಾಮ್ ಪ್ರತಿಪಾದಿಸುವ ದೇವನು ಲೋಕಕ್ಕೆ ದೃಷ್ಟಾಂತ ತೋರಿಸುವ ಶಕ್ತಿಯನ್ನು ಹೊಂದಿದ್ದಾನೆ ಎಂಬ ವಾದ ಸುಳ್ಳು ಮತ್ತು ನಿರಾಧಾರ ವಾದವಾಗಿದೆ. ಈ ವಾದ ಸತ್ಯವಾದುದಾಗಿದ್ದರೆ ನಮಗೆ ದೃಷ್ಟಾಂತ ತೋರಿಸಲ್ಪಡಬೇಕು ಎಂದು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನ ಮುಂದೆ ಬಾಗಿ ಪ್ರಾರ್ಥಿಸುತ್ತಾರೆ: ಓ ಅಲ್ಲಾಹ್ ನಾನು ನಿನ್ನೊಂದಿಗೆ ಬೇಡಿಕೊಳ್ಳುತ್ತೇನೆ. ನೀನು ನನಗೆ ಅನುಗ್ರಹಭರಿತ ದೃಷ್ಟಾಂತ ತೋರಿಸು ನೀನು ನನಗೆ ನಿನ್ನ ಶಕ್ತಿ ಸಾಮರ್ಥ್ಯ ಮತ್ತು ನಿನ್ನ ಸಾಮೀಪ್ಯ ಗಳಿಸಿದ ಬಗ್ಗೆ ದೃಷ್ಟಾಂತವನ್ನು ದಯಪಾಲಿಸು ಎಂದು. ಆದುದರಿಂದ ಆ ದೃಷ್ಟಾಂತ ಎಷ್ಟು ಬೇಗನೆ ಪ್ರಕಟವಾಗಬೇಕಿತ್ತೆಂದರೆ ಆ ದೃಷ್ಟಾಂತವನ್ನು ಆವಶ್ಯಪಟ್ಟವರು ಆಗ ಜೀವಿಸಿರಬೇಕಾಗಿತ್ತು. ಅನಂತರ ಹಾಗೆಯೇ ಸಂಭವಿಸಿತು. 1889ರಲ್ಲಿ ನಾನು ಅಲ್ಲಾಹನ ಭವಿಷ್ಯವಾಣಿಗಳ ಪ್ರಕಾರ ಜನಿಸಿದಾಗ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ದೃಷ್ಟಾಂತಗಳನ್ನು ಕೇಳಿದವರು ಜೀವಿಸಿದ್ದರು. ನಾನು ಬೆಳೆದ ಹಾಗೆ ಅಲ್ಲಾಹನ ದೃಷ್ಟಾಂತಗಳು ಹೆಚ್ಚು ಹೆಚ್ಚಾಗಿ ಪ್ರಕಟವಾಗುತ್ತಿದ್ದುವು. (ಮೇ ಹೀ ಮುಸ್ಲಿಹ್ ಮೌಊದ್ ಕಿ ಪೇಶ್ಗೂಯಿ ಕ ಮಿಸ್ದಾಖ್ ಹೂಂ, ಅನ್ವಾರುಲ್ ಉಲೂಮ್ ಸಂಪುಟ–17, ಪುಟ–222–223 )

ಆದುದರಿಂದ ಈ ದೃಷ್ಟಾಂತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತ ಕಾಲದಲ್ಲಿ ಮತ್ತು ಈ ದೃಷ್ಟಾಂತವನ್ನು ಕೋರಿದವರ ಜೀವಿತ ಕಾಲದಲ್ಲಿ ಪ್ರಕಟವಾಗುವುದು ಆವಶ್ಯಕವಾಗಿತ್ತು. ಅದು ಹಾಗೆಯೇ ಸಂಭವಿಸಿತು. ಇದು ಬಹಳ ಮುಖ್ಯ ವಿಷಯವಾಗಿದೆ. ನಮಗೆ ಇದರಿಂದ ಈ ಭವಿಷ್ಯವಾಣಿಯ ಮುಖ್ಯ ಉದ್ದೇಶಗಳು ಏನಾಗಿದೆ ಮತ್ತು ಏಕೆ ಇದು ಹಝ್ರತ್ ಮಸೀಹ್ ಮೌಊದ್(ಅ) ಅವರ ಕಾಲದಲ್ಲಿ ಇದನ್ನು ಈಡೇರುವುದು ಏಕೆ ಅನಿವಾರ್ಯವಾಗಿತ್ತು ಎಂದು ತಿಳಿದು ಬಂತು. ಇದರ ಬಗ್ಗೆ ಹಲವು ಅಂಶ ನಾನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ್ದೇನೆ. ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಅವರ ಈ ಪುತ್ರನ ಬಗ್ಗೆ ಏಕೆ ಈ ಭವಿಷ್ಯವಾಣಿಯು ಪೂರ್ಣಗೊಳ್ಳ ಬೇಕಾಗಿತ್ತು ಎಂಬುದರ ಬಗ್ಗೆ ಇದರ ಉದ್ದೇಶಗಳನ್ನು ವಿವರಿಸುತ್ತಾ ಒಮ್ಮೆ ಹಝ್ರತ್ ಮುಸ್‌ಲಿಹ್ ಮೌಊದ್(ರ) ಹೇಳುತ್ತಾರೆ:

"ಹಝ್ರತ್ ಮಸೀಹ್ ಮೌಊದ್(ಅ) ತಮ್ಮ 20 ಮಾರ್ಚ್ 1886ರ ವಿಜ್ಞಾಪನೆ ಪತ್ರದಲ್ಲಿ ಹೇಳುತ್ತಾರೆ ಅಲ್ಲಾಹನು ನನ್ನ ಮೇಲೆ ಈ ಮಾತನ್ನು ಸ್ಪಷ್ಟಪಡಿಸಿದ್ದಾನೆ ಅಂದರೆ ಲೋಕದ ಮುಂದೆ ವಿವರಿಸಿದ ಈ ಭವಿಷ್ಯವಾಣಿಯಲ್ಲಿ ಬಹಳಷ್ಟು ಉದ್ದೇಶಗಳಿವೆ. ಮೊದಲನೆಯದು, "ಜೀವಿಸಲು ಬಯಸುವವರು ಮೃತ್ಯುವಿನ ದವಡೆಯಿಂದ ಮುಕ್ತಿ ಪಡೆಯಲಿ ಮತ್ತು ಗೋರಿಗಳಲ್ಲಿ ಹೂತಲ್ಪಟ್ಟವರು ಹೊರ ಬರಲಿ" ಅಂದರೆ ಆಧ್ಯಾತ್ಮಿಕವಾಗಿ ಮರಣಹೊಂದಿರುವವರು ಜೀವಿಸಲಿ. "ಒಂದು ವೇಳೆ ಈ ಭವಿಷ್ಯವಾಣಿಯನ್ನು ಮುಂದಿನ ನಾಲ್ಕು ನೂರು ವರ್ಷಗಳ ನಂತರ ಸಂಭವಿಸುತ್ತದೆ ಎಂದು ಹೇಳಿದರೆ." ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. "ಇದರ ಅರ್ಥ ಹೀಗೆ ಆಗುತ್ತದೆ ಅಂದರೆ ನಾನು ಈ ಭವಿಷ್ಯವಾಣಿ ನುಡಿದಿರುವ ಕಾರಣ ಇಂದು ಜೀವಿಸಲು ಬಯಸುವವರು ಮೃತರಾಗಿಯೇ ಇರಲಿ ಅವರನ್ನು ನಾಲ್ಕು ನೂರು ವರ್ಷಗಳ ನಂತರ ಜೀವಿಸೋಣ ಎಂಧಾಗುತ್ತದೆ. ಹೀಗೆ ಹೇಳಿದರೆ ಈ ಮಾತು ತೀರ ತಪ್ಪಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ನಲವತ್ತು ದಿನಗಳ ಕಾಲ ಅಲ್ಲಾಹನ ಸನ್ನಿಧಿಯಲ್ಲಿ ಮಾಡಿರುವ ಪ್ರಾರ್ಥನೆಗಳ ಪ್ರತಿಫಲವನ್ನು ಇಸ್ಲಾಮ್ ಧರ್ಮದ ವಿರೋಧಿಯರ ಮುಂದೆ ಅಲ್ಲಾಹನ ಜೀವಂತ ಕುರುಹನ್ನು ತೋರಿಸುವುದಾಗಿದೆ. ಮತ್ತು ಯಾರು ಪವಾಡಗಳನ್ನು ನಿರಾಕರಿಸುತ್ತಿದ್ದಾರೋ ಅವರಿಗೆ ಇಂದಿಗೂ ಅಲ್ಲಾಹನು ಇಸ್ಲಾಮ್ ಮತ್ತು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರೊಂದಿಗೆ ಇದ್ದಾನೆ ಎಂಬುದರ ಬಗ್ಗೆ ಹೊಸ ಮತ್ತು ಅದ್ಭುತವಾದ ಸಾಕ್ಷಿಗಳನ್ನು ತೋರಿಸುವುದಾಗಿದೆ. ಇದರ ಬಗ್ಗೆ ಆ ಭವಿಷ್ಯವಾಣಿಯಲ್ಲಿ ಅಲ್ಲಾಹನ ದಿವ್ಯವಾಣಿಯು ಹೀಗಿದೆ "ಜೀವಿಸಲು ಬಯಸುವವರು ಮೃತ್ಯುವಿನ ದವಡೆಯಿಂದ ಮುಕ್ತಿ ಪಡೆಯಲಿ ಮತ್ತು ಗೋರಿಗಳಲ್ಲಿ ಹೂತಲ್ಪಟ್ಟವರು ಹೊರ ಬರಲಿ". ಈ ಭವಿಷ್ಯವಾಣಿಯನ್ನು ಮುಂದಿನ ನಾಲ್ಕು ನೂರು ವರ್ಷಗಳ ನಂತರ ಸಂಭವಿಸುತ್ತದೆ ಎಂದು ಹೇಳುವವರ ಪ್ರಕಾರ ನಂಬುವುದಾದರೆ. ಅಂದರೆ ಇಂದು ಜೀವಿಸಲು ಬಯಸುವರು ಅವರು ಮೃತರಾಗಿಯೇ ಇರಲಿ ನಾಲ್ಕು ವರ್ಷಗಳ ನಂತರ ಅವರು ಜೀವಿಸುತ್ತಾರೆ ಎಂಧಾಗುತ್ತದೆ. ಹೀಗೆ ಹೇಳುವವರನ್ನು ಯಾರಾದರು ಸರಿ ಎಂದು ನಂಬುವವರಿದ್ದಾರೆಯೇ?

ಎರಡನೆಯದು, ಈ ಭವಿಷ್ಯವಾಣಿಯನ್ನು ನುಡಿಯಲು ಕಾರಣ ಇಸ್ಲಾಮ್ ಧರ್ಮದ ಗೌರವ ಮತ್ತು ಅಲ್ಲಾಹನ ದಿವ್ಯವಾಣಿಗಳ (ಪವಿತ್ರ ಖುರ್‌ಆನ್) ಪದವಿ ಜನರ ಮೇಲೆ ಸ್ಪಷ್ಟವಾಗಲಿ ಎಂದು. ಈ ವಾಕ್ಯದಿಂದ ನಮಗೆ ಸ್ಪಷ್ಟವಾಗುತ್ತದೆ ಅಂದಿನ ಕಾಲದಲ್ಲಿ ಇಸ್ಲಾಮ್ ಧರ್ಮದ ಗೌರವ ಜನರ ಮೇಲೆ ಸ್ಪಷ್ಟವಾಗಿರಲಿಲ್ಲ. ಅದೇ ರೀತಿ ಅಲ್ಲಾಹನ ದಿವ್ಯವಾಣಿಯು ಜನರ ಮೇಲೆ ಸ್ಪಷ್ಟವಾಗಿರಲಿಲ್ಲ ಎಂದು ಹೇಳಲಾಗುವುದು ಏಕೆಂದರೆ ಅಲ್ಲಾಹನು ಈ ಭವಿಷ್ಯವಾಣಿಯನ್ನು ಇಸ್ಲಾಮ್ ಧರ್ಮದ ಗೌರವ ಮತ್ತು ಅಲ್ಲಾಹನ ದಿವ್ಯವಾಣಿಗಳ (ಪವಿತ್ರ ಖುರ್‌ಆನ್) ಪದವಿಯನ್ನು ಇಂದಿನಿಂದ ಮುನ್ನೂರು ವರ್ಷಗಳ ನಂತರ ಈ ಜನರು ಮೃತರಾದನಂತರ ಮತ್ತು ಅವರ ಮಕ್ಕಳು ಸಹ ಮೃತರಾದ ನಂತರ ಮತ್ತು ಅವರ ಮಕ್ಕಳು ಸಹ ಮೃತರಾದ ನಂತರ ಅಲ್ಲಾಹನು ಈ ಭವಿಷ್ಯವಾಣಿಯನ್ನು ಜನರ ಮೇಲೆ ಸ್ಪಷ್ಟ ಪಡಿಸುವನು. ಆಗ ಪಂಡಿತ್ ಲೇಖ್ರಾಮ್ ಸಹ ಇರುವುದಿಲ್ಲ ಮತ್ತು ಮುನ್‌ಶಿ ಇಂದರ್‌ಮನ್ ಸಹ ಇರುವುದಿಲ್ಲ ಮತ್ತು ಮಕ್ಕಳು, ಮೊಮ್ಮಕ್ಕಳು ಸಹ ಇರುವುದಿಲ್ಲ. ಆಗ ಇಸ್ಲಾಮ್ ಧರ್ಮದ ಗೌರವ ಮತ್ತು ಅಲ್ಲಾಹನ ದಿವ್ಯವಾಣಿಗಳ ಪದವಿ ಜನರ ಮೇಲೆ ವ್ಯಕ್ತವಾಗುತ್ತದೆ.

ಈಗ ಹೇಳಿರಿ ಯಾವ ವ್ಯಕ್ತಿ ಇದನ್ನು ಸರಿ ಎಂದು ಹೇಳುವನು..? ಅವರಲ್ಲಿ ಬುದ್ಧಿ ಇದೆಯೇ?

ಮೂರನೆಯದು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ "ಈ ಭವಿಷ್ಯವಾಣಿ ನುಡಿಯಲು ಕಾರಣ ಸತ್ಯವು ತನ್ನ ಎಲ್ಲ ಅನುಗ್ರಹಗಳೊಂದಿಗೆ ಬರುವಂತಾಗಲಿ ಹಾಗೂ ಮಿಥ್ಯವೂ ತನ್ನ ಎಲ್ಲ ಅಪಶಕುನದೊಂದಿಗೆ ಪಲಾಯನ ಮಾಡಲಿ." ಅದರ ಅರ್ಥವು ಸಹ ಇಲ್ಲಿ ಸ್ಪಷ್ಟವಾಗುತ್ತಿದೆ ಸತ್ಯವು ಆ ಕಾಲದಲ್ಲಿ ಬಹಳ ದೌರ್ಬಲ್ಯದ ಸ್ಥಿತಿಯಲ್ಲಿತ್ತು ಮತ್ತು ಮಿಥ್ಯವು ಜಯಶಾಲಿಯಾಗಿತ್ತು. ಅಲ್ಲಾಹನು ಬಯಸಿದ್ದೇನೆಂದರೆ ಬೌದ್ಧಿಕವಾಗಿ ಹಾಗೂ ವೈಜ್ಞಾನಿಕವಾಗಿ ಇಸ್ಲಾಮ್ ಧರ್ಮದ ಶತ್ರುಗಳ ಮೇಲೆ ಇಸ್ಲಾಮ್ ಧರ್ಮವು ಸತ್ಯವಾಗಿದೆ ಎಂದು ಖಚಿತವಾಗಬೇಕು ಮತ್ತು ಅವರೆಲ್ಲರು ಇಸ್ಲಾಮ್ ಧರ್ಮವು ಸತ್ಯವಾಗಿದೆ ಎಂದು ತಿಳಿಯಬೇಕು ಮತ್ತು ಇಸ್ಲಾಮ್‌ನ ಎದುರಿಗೆ ಇನ್ನಿತರ ಧರ್ಮಗಳು ಮಿತ್ಯವೆಂದು ಸ್ಪಷ್ಟಪಡಿಸಲು ಈ ಭವಿಷ್ಯವಾಣಿಯನ್ನು ಸ್ಪಷ್ಟ ಪಡಿಸಿದ್ದಾನೆ.

ನಾಲ್ಕನೆಯ ಉದ್ದೇಶ, ಜನರು ತಿಳಿಯಲಿ ನಾನು ಎಲ್ಲಾ ಕಾರ್ಯಗಳಲ್ಲೂ ಸರ್ವ ಸಮರ್ಥನಾಗಿದ್ದೇನೆ (ಖಾದಿರ್). ಈಗ ವಿಚಾರ ಮಾಡಬೇಕಾದ ವಿಷಯವೇನೆಂದರೆ ಜನರು ಅಲ್ಲಾಹನನ್ನು ಹೇಗೆ ಖಾದಿರ್ ಎಂದು ತಿಳಿಯಲು ಸಾಧ್ಯ. ಒಂದು ವೇಳೆ ಈ ಭವಿಷ್ಯವಾಣಿಯು ಮುನ್ನೂರು ಅಥವಾ ನಾಲ್ಕುನೂರು ವರ್ಷಗಳ ನಂತರ ಸಂಭವಿಸುತ್ತದೆ ಆಗ ನೀವು ಇಸ್ಲಾಮ್ ಧರ್ಮದ ದೇವರು ಖಾದಿರ್ ಆಗಿದ್ದಾನೆ ಎಂದು ಸಾಬೀತಾಗುತ್ತದೆ ಎಂದಾದರೆ ಪಂಡಿತ್ ಲೇಖರಾಮ್ ಅವರ ಬಳಿ ಇಂತಹ ಭವಿಷ್ಯವಾಣಿಗೆ ಮಹತ್ವ ನೀಡಲು ಸಾಧ್ಯವೇ ಅಥವಾ ಈ ಕಾಲದಲ್ಲಿ ಇಸ್ಲಾಮ್ ಧರ್ಮದ ವಿರುದ್ಧ ಮತ್ತು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ವಿರುದ್ಧ ಆಕ್ಷೇಪ ಮಾಡುವರು ಇಸ್ಲಾಮ್ ಧರ್ಮವನ್ನು ಮೃತ ಧರ್ಮ ಎಂದು ಹೇಳುವವರನ್ನು ನೀವು ಮುನ್ನೂರು ಅಥವಾ ನಾಲ್ಕು ನೂರು ವರ್ಷಗಳ ನಂತರ ಇಸ್ಲಾಮ್ ದರ್ಮವನ್ನು ಮತ್ತು ಇಸ್ಲಾಮ್ ಧರ್ಮದ ಪ್ರಭುವನ್ನು ಖಾದರ್ ಆಗಿದ್ದಾನೆ ಎಂದು ನಂಬಲು ಪ್ರಾರಂಭಿಸುವಿರಿ ಇದು ಮುನ್ನೂರು ಅಥವಾ ನಾಲ್ಕುನೂರು ವರ್ಷಗಳ ನಂತರ ಸಂಭವಿಸುತ್ತದೆ ಎಂದು ಹೇಳಿದರೆ ಆ ಜನರೆಲ್ಲರು ಇದನ್ನು ನಂಬಲು ಹೇಗೆ ಸಾಧ್ಯ? ಅವರು ನಾವು ಇಂತಹ ಮಾತುಗಳನ್ನು ನಂಬುವುದಿಲ್ಲ ಎಂದು ಹೇಳುವರು. ಹೀಗೆ ಎಲ್ಲರು ಹೇಳಲು ಸಾಧ್ಯ ಇದೆ. ನಮ್ಮ ಮುಂದೆ ಯಾವುದಾದರು ಕುರುಹನ್ನು ತೋರಿಸಿದರೆ ಮಾತ್ರ ನಮ್ಮನ್ನು ನಂಬಲು ಸಾಧ್ಯ. ನಮ್ಮ ಕಣ್ಣು ಮುಂದೆ ಇಸ್ಲಾಮ್ ಧರ್ಮದ ಪ್ರಭು ಖಾದಿರ್ ಆಗಿದ್ದಾನೆ ಎಂದು ಸಾಬಿತ್ ಪಡಿಸಿದರೆ ಮಾತ್ರ ನಮ್ಮನ್ನು ನಂಬಲು ಸಾಧ್ಯ ಎನ್ನುತ್ತಾರೆ." ಹೀಗೆ ಈ ದೃಷ್ಟಾಂತವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದಲ್ಲಿಯೇ ಸಾಬೀತಾಯಿತು.

"ಐದನೇಯ ಉದ್ದೇಶ, ನಾನು ನಿನ್ನೊಂದಿಗಿದ್ದೇನೆ ಎಂದು ಅವರಿಗೆ ಮನವರಿಕೆ ಆಗಲಿ." ಅಂದರೆ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗಿದ್ದಾನೆ. "ಒಂದು ವೇಳೆ ಈ ಭವಿಷ್ಯವಾಣಿಯು ನಾಲ್ಕು ವರ್ಷಗಳ ನಂತರ ಪೂರ್ಣವಾಗಬೇಕಾದರೆ ಈ ಕಾಲದಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಇದ್ದಾನೆ ಎಂದು ಜನರು ನಂಬಲು ಹೇಗೆ ಸಾಧ್ಯ. ಆರನೆಯ ಉದ್ದೇಶವು ಹೀಗೆ ಪ್ರಸ್ತಾಪಿಸಲಾಗಿದೆ, ಯಾರು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವರೊ, ಅಲ್ಲಾಹ್ ಮತ್ತು ಅಲ್ಲಾಹನ ಧರ್ಮ, ಅವನ ಗ್ರಂಥ ಮತ್ತು ಅವನ ಪ್ರವಾದಿ ಆದ ರಸೂಲ್ ಸಲಲ್ಲಾಹು ಅಲೈಹಿವಸಲ್ಲಮರನ್ನು ನಿರಾಕರಿಸುತ್ತಾರೆ ಮತ್ತು ಧಿಕ್ಕರಿಸುವ ದೃಷ್ಟಿಯಿಂದ ನೋಡುವರೋ ಅವರಿಗಾಗಿ ಒಂದು ಸ್ಪಷ್ಟವಾದ ಮಾರ್ಗ ದೊರೆಯುವಂತಾಗಲಿ. ಇದರ ಅರ್ಥವು ಸಹ ಹೀಗಿದೆ ಇಸ್ಲಾಮ್ ಧರ್ಮದ ಸತ್ಯತೆಗೆ ಒಂದು ಸ್ಪಷ್ಟವಾದ ದೃಷ್ಟಾಂತವು ದೊರೆಯುವುದು. ಆದರೆ ಅದು ಮುನ್ನೂರು ಅಥವಾ ನಾಲ್ಕು ನೂರು ವರ್ಷಗಳ ನಂತರ ಅವರ ಮಕ್ಕಳು ಮತ್ತು ಅವರ ಮಕ್ಕಳು ಸಹ ಮರಣ ಹೊಂದಿದ ನಂತರ. ಈ ಮಾತು ಸಹ ಬುದ್ಧಿವಂತರ ಮಾತಲ್ಲ. ಏಳನೇಯ ಉದ್ದೇಶವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಪರಾಧಿಗಳ ಮಾರ್ಗವು ಬಹಿರಂಗವಾಗಲಿ. ನಾಲ್ಕು ನೂರು ವರ್ಷಗಳ ನಂತರ ಬರುವವನಿಗೆ ಈ ಕಾಲದ ಜನರಿಗೆ ನನ್ನ ಕಾಲದಲ್ಲಿ ಇಸ್ಲಾಮ್ ವಿರೋಧಿಗಳು ಅಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದಲ್ಲಿ. ಅವರ ಮುಂದೆ ನಾನು ಈ ಭವಿಷ್ಯವಾಣಿಯನ್ನು ನುಡಿಯುತ್ತೇನೆ ಅವರಿಗೆ ಅವರು ಅಪರಾಧಿಗಳು, ಸುಳ್ಳುಗಾರರು ಎಂದು ತಿಳಿಯಲು ಹೇಗೆ ಸಾಧ್ಯ." (ಅಲ್‌ಮೌಊದ್, ಅನ್ವಾರುಲ್ ಉಲೂಮ್ ಸಂಪುಟ–17, ಪುಟ–542–544)

ಹೀಗೆ ಈ ಭವಿಷ್ಯವಾಣಿಯು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸ್ವತಃ ತಮ್ಮ ಪುತ್ರನ ಬಗ್ಗೆ ಆಗಿತ್ತೆಂದು ಭವಿಷ್ಯವಾಣಿಯ ಪದಗಳಿಂದ ವ್ಯಕ್ತವಾಗುತ್ತದೆ ನಿನ್ನ ಅಂಶದಿಂದ ಹಾಗೂ ನಿನ್ನ ವಂಶದಿಂದ ಆಗುವನು. ನಂತರದ ವಂಶದಿಂದ ಅಗುವುದಿಲ್ಲ. ಇದು ತಮ್ಮ ಪುತ್ರನ ಬಗ್ಗೆ ಆಗಿತ್ತು ಅದು ಬಹಳ ವೈಭವದಿಂದ ಪೂರ್ಣಗೊಂಡಿತು. ಮತ್ತು 52 ವರ್ಷಗಳ ಸುದೀರ್ಘ ಕಾಲದ ಖಿಲಾಫತ್ ಸಹ ಪ್ರಜ್ವಲಿಸುವ ಕುರುಹು ಆಗಿತ್ತು. ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಜ್ಞಾನದ ಬಗ್ಗೆ ಅನುರು ಸಹ ಪ್ರಶಂಶಿಸಿದ್ದಾರೆ ಅದರ ವಿವರಗಳು ಜಮಾಅತ್ತಿನ ಸಾಹಿತ್ಯದಲ್ಲಿದೆ. ಅದನ್ನು ವಿವರಿಸಲು ಪ್ರಾರಂಭಿಸಿದರೆ ಬಹಳ ಸಮಯ ಬೇಕಾಗುವುದು.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ನಾನೇ ಮುಸ್ಲಿಹ್ ಮೌಊದ್ ಎಂದು ಪ್ರಕಟಿಸಿದರು. ಅದಕ್ಕೆ ಮೊದಲು ಅವರ ವಿರುದ್ಧ ಕೆಲವರು ಆಕ್ಷೇಪಿಸುತ್ತಿದ್ದರು. ಅವರು ತಾನು ಮುಸ್ಲಿಹ್ ಮೌಊದ್ ಎಂದು ಏಕೆ ಘೋಷಿಸಲಿಲ್ಲ ಎಂದು. 1944ರಲ್ಲಿ ಅವರು ಪ್ರಕಟಿಸಿದರು ನಾನು ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ ನಾನೇ ಮುಸ್ಲಿಹ್ ಮೌಊದ್ ಭವಿಷ್ಯವಾಣಿ ಸೂಚಿಸುವ ವ್ಯಕ್ತಿಯಾಗಿದ್ದೇನೆ. ನಾನು ಸುಳ್ಳು ಸೃಷ್ಟಿಸಿದ್ದೇನೆಂದೂ ನಾನು ಇದಕ್ಕೆ ಸಂಬಂಧಿಸಿ ಸುಳ್ಳು ಹೇಳುತ್ತಿದ್ದೇನೆಂದೂ ಯಾರಾದರೂ ಭಾವಿಸುವುದಿದ್ದರೆ ಅಂತಹ ವ್ಯಕ್ತಿ ಮುಂದೆ ಬಂದು ನನ್ನೊಂದಿಗೆ ಇದರ ಬಗ್ಗೆ ಮುಬಾಹಲ (ಪ್ರಾರ್ಥನಾ ಸಮರ) ಮಾಡಲಿ. ಆಗ ಅಲ್ಲಾಹನು ದೈವಿಕ ದೃಷ್ಟಾಂತಗಳ ಮೂಲಕ ತೀರ್ಪು ನೀಡುವನು ಯಾರು ಸತ್ಯವಂತ ಮತ್ತು ಯಾರು ಸುಳ್ಳುಗಾರ ಎಂದು. ಆದರೆ ಯಾರೂ ಎದುರಿಗೆ ಬರಲಿಲ್ಲ. ನಿಮ್ಮ ವಿರೋಧಿಗಳು ಯಾರು ನಿಮ್ಮ ಮುಂದೆ ಬರಲಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ವೇಳೆ ಯಾರಾದರು ಹೇಳಲಿ ಕನಸು ನಿಜವಾಗಿದೆ ಎಂದು ಮಿಸ್ರಿ ಸಾಹೆಬ್ ಹೇಳಿದ ಹಾಗೆ (ಕೆಲವರು ಮುರ್ತದ್ (ಧರ್ಮಭ್ರಷ್ಟ) ಆಗಿದ್ದಾರೆ) ಅವರು ಅದರ ಸತ್ಯತೆಯ ಬಗ್ಗೆ ಒಂದು ಲೇಖನವನ್ನು ಬರೆಯಲಿ. ನಾನು ಆ ಲೇಖನಕ್ಕೆ ಉತ್ತರ ನೀಡುವೆನು ಮತ್ತು ನಾನು ದೃಢ ನಂಬಿಕೆಯಿಂದ ಹೇಳುತ್ತೇನೆ ಒಂದು ವೇಳೆ ಅವರು ನನ್ನ ಮುಂದೆ ಎದುರಾದರೆ ಅವರು ಮರೆಯಲಾರದ ಅಪಮಾನವನ್ನು ಅನುಭವಿಸುವರು. ಹೀಗೆ ಯಾವ ಭವಿಷ್ಯವಾಣಿ ಈಡೇರುವ ಬಗ್ಗೆ ದೀರ್ಘ ಕಾಲದಿಂದ ಪ್ರತೀಕ್ಷಿಸಲಾಗುತ್ತಿತ್ತೋ ಆ ಭವಿಷ್ಯವಾಣಿ ಬಗ್ಗೆ ಅಲ್ಲಾಹನು ಅನುಗ್ರಹ ಮತ್ತು ಕಾರುಣ್ಯದ ಮೂಲಕ ತನ್ನ ಇಲ್‌ಹಾಮ್ ಮತ್ತು ಚಿಹ್ನೆಗಳ ಮೂಲಕ ನನಗೆ ತಿಳಿಸಿದನು, ಈ ಭವಿಷ್ಯವಾಣಿ ನನ್ನಲ್ಲಿ ಈಡೇರಿದೆ ಎಂದು. ಈಗ ಇಸ್ಲಾಮಿನ ಶತ್ರುಗಳಿಗೆ ಅಲ್ಲಾಹನು ಹೀಗೆ ಪರಿಪೂರ್ಣವಾದ ಸಾಕ್ಷ್ಯಾಧಾರ ತೋರಿಸಿದ್ದಾನೆ: ಇಸ್ಲಾಮ್, ಅಲ್ಲಾಹನ ಸತ್ಯ ಧರ್ಮ ಎಂದೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನ ಸತ್ಯಸಂಧರಾದ ಸಂದೇಶವಾಹಕರು ಎಂದೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನಿಂದ ನಿಯೋಗಿತರಾದವರು ಎಂದೂ. ಇಸ್ಲಾಮ್ ಮಿಥ್ಯ ಧರ್ಮ ಎಂದು ಹೇಳುವವರು ಸುಳ್ಳುಗಾರರೆಂದೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸುಳ್ಳುಗಾರನೆಂದು ಹೇಳುವವರು ಸುಳ್ಳುಗಾರರೆಂದೂ ಅಲ್ಲಾಹನು ಸಾಕ್ಷ್ಯಾಧಾರಗಳ ಮೂಲಕ ತೋರಿಸಿಕೊಟ್ಟಿರುವನು. ಅಲ್ಲಾಹನು ಈ ವೈಭವಶಾಲಿ ಭವಿಷ್ಯವಾಣಿ ಮೂಲಕ ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯತೆ ಬಗ್ಗೆ ಒಂದು ಜೀವಂತ ಸಾಕ್ಷ್ಯಾಧಾರವನ್ನು ಜನರ ಮುಂದೆ ಇರಿಸಿರುವನು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: 1886ರಲ್ಲಿ ಎಂದರೆ ಐವತ್ತೆಂಟು ವರ್ಷಗಳ ಹಿಂದೆ ಒಬ್ಬ ವ್ಯಕ್ತಿ ಸ್ವತಃ ಹೀಗೆ ಸಮಾಚಾರ ನೀಡಲು ಹೇಗೆ ತಾನೆ ಸಾಧ್ಯವಿತ್ತು. ಅವರಿಗೆ ಒಬ್ಬ ಪುತ್ರ ಒಂಬತ್ತು ವರ್ಷಗಳೊಳಗೆ ಜನಿಸುವನು. ಅವನು ಬೇಗ ಬೇಗನೆ ಬೆಳೆದು ಲೋಕದ ಎಲ್ಲೆಗಳ ತನಕ ಪ್ರಸಿದ್ಧಿಯನ್ನು ಗಳಿಸುವನು. ಅವನು ಇಸ್ಲಾಮ್ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರನ್ನು ಲೋಕದಲ್ಲಿ ಹರಡುವನು. ಅವನು ಬಾಹ್ಯ ಮತ್ತು ಆಧ್ಯಾತ್ಮಿಕ ಜ್ಞಾನದಿಂದ ಭರಿತನಾಗುವನು. ಅವನು ಅಲ್ಲಾಹನ ಪ್ರತಾಪದ ಪ್ರಕಟಣೆಯ ಕಾರಣವಾಗುವನು. ಅವನು ಅಲ್ಲಾಹನ ಸಾಮರ್ಥ್ಯ ಮತ್ತು ಅವನ ಸಾಮೀಪ್ಯ ಮತ್ತು ಅವನ ಅನುಗ್ರಹದ ಒಂದು ಜೀವಂತ ದೃಷ್ಟಾಂತವಾಗುವನು. ಇಂತಹ ಸಮಾಚಾರವನ್ನು ಲೋಕದ ಯಾವುದೇ ವ್ಯಕ್ತಿಗೆ ಸ್ವತಃ ತನ್ನಿಷ್ಟದಂತೆ ನೀಡಲು ಸಾಧ್ಯವಿರಲಿಲ್ಲ. ಅಲ್ಲಾಹನೇ ಈ ಸಮಾಚಾರ ನೀಡಿದನು. ಅವನೇ ಅದನ್ನು ಈ ಮನುಷ್ಯನ ಮೂಲಕ ಈಡೇರಿಸಿದನು. (ಹಝ್ರತ್ ಮುಸ್ಲಿಹ್ ಮೌಊದ್(ರ) ತಮ್ಮ ಬಗ್ಗೆ ಹೇಳುತ್ತಿದ್ದಾರೆ ಈ ಮನುಷ್ಯನ ಮೂಲಕ ಈಡೇರಿಸಿದನು) ಅವರ ಬಗ್ಗೆ ವೈದ್ಯರು ಹೆಚ್ಚು ವರ್ಷ ಬದುಕುವನು ಎಂದು ನಂಬುತ್ತಿರಲಿಲ್ಲ ಅಂದರೆ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ಚಿಕ್ಕವರಿದ್ದಾಗ ಅವರ ಆರೋಗ್ಯವು ಚನ್ನಾಗಿರುತ್ತಿರಲಿಲ್ಲ ವೈದ್ಯರು ಅವರ ಆರೋಗ್ಯವನ್ನು ಕಂಡು ಇವರು ಆರೋಗ್ಯವಂತರಾಗಿ ಬದುಕುವರು ಎಂದು ಹೇಳುತ್ತಿರಲಿಲ್ಲ. ಏನೇ ಇರಲಿ ಮುಂದೆ ಹಝ್ರತ್ ಮುಸ್ಲಿಹ್ ಮೌಊದ್(ರ) ತಮ್ಮ ಬಗ್ಗೆ ಹೇಳುತ್ತಾರೆ: "ನನ್ನ ಆರೋಗ್ಯದ ಬಗ್ಗೆ ಬಾಲ್ಯದಲ್ಲಿ ಒಮ್ಮೆ ಡಾ॥ ಯಾಖೂಬ್ ಬೇಗ್ ಸಾಹೆಬರು ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ನನಗೆ ಸಿಲ್

(ಕ್ಯಾಂಸರ್) ರೋಗವಾಗಿದೆ ಎಂದು ತಿಳಿಸಿದರು. ಯಾವುದಾದರು ಬೆಟ್ಟದ ಜಾಗಕ್ಕೆ (ಗಿರಿಧಾಮಕ್ಕೆ) ಕರೆದುಕೊಂಡು ಹೋಗಬೇಕು ಎಂದು ಹೇಳಿದ್ದರು. ಆದ್ದರಿಂದ ಹಝ್ರತ್ ಮಸೀಹ್ ಮೌಊದ್[ಅ] ನನಗೆ ಶಿಮ್ಲಕ್ಕೆ ಕಳುಹಿಸಿದರು. ಆದರೆ ಅಲ್ಲಿ ನನಗೆ ಬಹಳ ಬೇಸರ ಆಗಿದ್ದರಿಂದ ಅಲ್ಲಿಂದ ಬೇಗ ಮರಳಿ ಬಂದೆನು. ಹೀಗೆ ಆರೋಗ್ಯವು ಒಂದು ದಿವಸವು ಚನ್ನಾಗಿರದಂತಹ ವ್ಯಕ್ತಿಯನ್ನು ಅಲ್ಲಾಹನು ಜೀವಂತವಾಗಿರಿಸಿದನು. ಈ ಭವಿಷ್ಯವಾಣಿಯನ್ನು ಪೂರ್ಣಗೊಳಿಸಲಿಕ್ಕಾಗಿ ಅಲ್ಲಾಹನು ನನಗೆ ಜೀವಂತವಾಗಿರಿಸಿದನು. ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಸತ್ಯತೆಯ ಸಾಕ್ಷಿಯನ್ನು ಜನರ ಮುಂದೆ ವ್ಯಕ್ತಪಡಿಸಿದನು. ನನಗೆ ಲೌಕಿಕ ಜ್ಞಾನ ಲಭಿಸಿರಲಿಲ್ಲ ಆದರೆ ಅಲ್ಲಾಹನು ತನ್ನ ಅನುಗ್ರಹದಿಂದ ದೇವಧೂತರನ್ನು ನನ್ನ ವಿದ್ಯಾಭ್ಯಾಸಕ್ಕೆ ಕಳುಹಿಸಿದನು ಮತ್ತು ನನಗೆ ಪವಿತ್ರ ಖುರ್‌ಆನಿನ ಜ್ಞಾನವನ್ನು ನೀಡಲಾಯಿತು. ಅದು ಯಾವ ವ್ಯಕ್ತಿಯ ಯೋಚನೆಗೆ ಬರದ ಹಾಗೆ ಆಯಿತು. ನನ್ನ ಮನಸ್ಸಿನಲ್ಲಿ ಹುಟ್ಟಿದ ಆ ಆಧ್ಯಾತ್ಮಿಕ ಜ್ಞಾನದ ಜಲವು ಕಲ್ಪಿಸುವುದಕ್ಕೆ ಅಸಾಧ್ಯ. ಬದಲಿಗೆ ನಾನು ದೃಢವಾಗಿ ಹೇಳುತ್ತೇನೆ ಯಾರಾದರು ಅವನಿಗೆ ಪವಿತ್ರಖುರ್‌ಆನಿನ ಜ್ಞಾನವನ್ನು ನೀಡಲಾಗಿದೆ ಎಂದು ದಾವೆ ಮಾಡಿದರೆ ನಾನು ಆತನಿಗೆ ಪಂಥಾಹ್ವಾನ ನೀಡುತ್ತೇನೆ ನನ್ನೊಂದಿಗೆ ಎದುರಾಗಲಿ ಎಂದು. ನಾನು ಸದಾ ಅವನೊಂದಿಗೆ ಎದುರಾಗಲು ಸಿದ್ಧನಿದ್ದೇನೆ. ಈ ಪಂಥಾಹ್ವಾನವು ಹಝ್ರತ್ ಮುಸ್ಲಿಹ್ ಮೌಊದ್[ರ] ಅಕಾಲದಲ್ಲಿ ನೀಡಿದ್ದಾರೆ. ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: "ನನಗೆ ಅರಿವಿದೆ ಇಂದು ಲೋಕದಾದ್ಯಂತ ನನ್ನನ್ನು ಬಿಟ್ಟು ಯಾರಿಗೂ ಅಲ್ಲಾಹನು ಪವಿತ್ರ ಖುರ್‌ಆನಿನ ಜ್ಞಾನ ನೀಡಲಿಲ್ಲ ಎಂದು. ಅಲ್ಲಾಹನು ನನಗೆ ಪವಿತ್ರ ಖುರ್‌ಆನಿನ ಜ್ಞಾನ ನೀಡಿದ್ದಾನೆ. ಈ ಕಾಲದಲ್ಲಿ ಖುರ್‌ಆನ್ ಕಲಿಸುವುದಕ್ಕೆ ಆಧ್ಯಾಪಕನನ್ನಾಗಿ ನನ್ನನ್ನು ಅಲ್ಲಾಹನು ನೇಮಿಸಿದ್ದಾನೆ. ಅಲ್ಲಾಹನು ನನಗೆ ಕಳುಹಿಸಿರುವ ಉದ್ದೇಶ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಹಾಗೂ ಪವಿತ್ರ ಖುರ್‌ಆನಿನ ಹೆಸರನ್ನು ಲೋಕದ ಎಲ್ಲೆಗಳ ತನಕ ತಲುಪಿಸಲಿ ಮತ್ತು ಇಸ್ಲಾಮ್ ಧರ್ಮದ ಎದುರಿಗೆ ಅನ್ಯ ಎಲ್ಲಾ ಧರ್ಮಗಳನ್ನು ಸೋಲಿಸಲಿ ಎಂದು ನನಗೆ ಕಳುಹಿಸಿದ್ದಾನೆ. ಲೋಕವು ತನ್ನ ಸಂಪೂರ್ಣ ಬಲವನ್ನು ಉಪಯೋಗಿಸಲಿ, ತನ್ನ ಎಲ್ಲಾ ಸಂಪೂರ್ಣ ಶಕ್ತಿಗಳನ್ನು ಉಪಯೋಗಿಸಿಕೊಳ್ಳಲಿ, ಕ್ರೈಸ್ತ ರಾಜರು ಮತು ಅವರ ಸಾಮ್ರಾಜ್ಯಗಳು ಒಗ್ಗೂಡಲಿ, ಯೂರೋಪ್ ಮತ್ತು ಅಮೇರಿಕ ಸಹ ಸೇರಿಕೊಳ್ಳಲಿ, ಅದೇ ರೀತಿ ಲೋಕದ ವಿವಿಧ ಎಲ್ಲಾ ಶಕ್ತಿಶಾಲಿ ಸಾಮ್ರಾಜ್ಯಗಳು ಸೇರಿಕೊಂಡರೂ ಸಹ ನಾನು ಅಲ್ಲಾಹನ ಆಣೆ ಹಾಕಿ ಹೇಳುತ್ತೇನೆ ಅವರು ನನ್ನ ಈ ಉದ್ದೇಶವನ್ನು ವಿಫಲಗೊಳಿಸಲು ಸಾಧ್ಯವಿಲ್ಲ. ಅಲ್ಲಾಹನು ನನ್ನ ಪ್ರಾರ್ಥನೆಗಳ ಮತ್ತು ಪ್ರಯತ್ನಗಳನ್ನು ವಿಫಲಗೊಳಿಸಲು ಸಾಧ್ಯವಿಲ್ಲ. ನನ್ನ ಪ್ರಯತ್ನಗಳ ಮುಂದೆ ಅವರ ಎಲ್ಲಾ ಉಪಾಯಗಳು ವ್ಯರ್ಥವಾಗುವವು. ಅಲ್ಲಾಹನು ನನ್ನಿಂದ, ನನ್ನ ವಿದಾರ್ಥಿಗಳಿಂದ ಮತ್ತು ನನ್ನ ಅನುಯಾಯಿಗಳಿಂದ ಈ ಭವಿಷ್ಯವಾಣಿಯ ಸತ್ಯತೆಯನ್ನು ಸಾಬಿತುಪಡಿಸಲು ಪ್ರವದಿ[ಸ] ಅವರ ಮುಖಾಂತರ ಮತ್ತು ಇಸ್ಲಾಮಿನ ಶ್ರೇಷ್ಠತೆಯನ್ನು ಖಾಯಮ್‌ಗೊಳಿಸುವನು. ಇಸ್ಲಾಮ್ ಧರ್ಮವು ಪುನಃ ತನ್ನ ಶ್ರೇಷ್ಠತೆಯೊಂದಿಗೆ ಖಾಯಮ್‌ಗೊಳಿಸುವ ತನಕ ಲೋಕವನ್ನು ಬಿಡುವುದಿಲ್ಲ ಮತ್ತು ಲೋಕವು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮರನ್ನು ಜೀವಂತ ಪ್ರವಾದಿ ಎಂದು ನಂಬುವ ತನಕ ಬಿಡುವುದಿಲ್ಲ."

ಒಟ್ಟಿನಲ್ಲಿ ಇದು ಸಾಮಾನ್ಯವಾದೊಂದು ಪ್ರಕಟಣೆಯಲ್ಲ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ 52 ವರ್ಷಗಳ ಖಿಲಾಫತ್ ಕಾಲದ ಪ್ರತಿಯೊಂದು ದಿವಸ ಈ ಭವಿಷ್ಯವಾಣಿಯ ವೈಭವವನ್ನು ಪ್ರಕಟಿಸುತ್ತಾ ಇತ್ತು. ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಓ ನನ್ನ ಸ್ನೇಹಿತರೇ, ನಾನು ನನಗೋಸ್ಕರ ಯಾವುದೇ ಗೌರವವನ್ನು ಆಶಿಸುತ್ತಾ ಇಲ್ಲ. ಅಲ್ಲಾಹನು ತಿಳಿಸುವ ತನಕ ನಾನು, ನನಗೆ ಹೆಚ್ಚಿಗೆ ಆಯುಸ್ಸು ದೊರಕುವ ಆಶೆ ಹೊಂದಿರಲಿಲ್ಲ. ನಾನು ದೃಢವಿಶ್ವಾಸ ಹೊಂದಿದ್ದೇನೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮತ್ತು ಇಸ್ಲಾಮಿನ ಗೌರವವನ್ನು ನೆಲೆ ನಿಲ್ಲಿಸಲು ಮತ್ತು ಇಸ್ಲಾಮನ್ನು ತನ್ನ ಪಾದದಲ್ಲಿ ನಿಲ್ಲಿಸಲು, ಮಸೀಹಿಯ್ಯತ್ತನ್ನು ತುಳಿದು ಹಾಕಲು ನನ್ನ ಹಿಂದಿನ ಅಥವಾ ಮುಂದಿನ ಕೆಲಸಗಳು ಇನ್‌ಶಾಅಲ್ಲಾಹ್ ಸಾಕಷ್ಟು ಪ್ರಯೋಜನಕಾರಿಯಾಗುವುವು. ಶೈತಾನನ ಶಿರವನ್ನು ತುಳಿದು ಹಾಕುವ, ಮಸೀಹಿಯ್ಯತ್ತನ್ನು ಕೊನೆಗೊಳಿಸುವ ಹಿಮ್ಮಡಿಗಳಲ್ಲಿ ನನ್ನ ಹಿಮ್ಮಡಿ ಸಹ ಇರುವುದು – ಇನ್‌ಶಾಅಲ್ಲಾಹ್. ಹಝ್ರತ್ ಮುಸ್ಲಿಹ್ ಮೌಊದ್[ರ] ಪುನಃ ಹೇಳುತ್ತಾರೆ: ನಾನು ಈ ಸತ್ಯತೆಯನ್ನು ಬಹಳ ಸ್ಪಷ್ಟವಾಗಿ ಇಡಿ ವಿಶ್ವದ ಮುಂದೆ ಹೇಳುತ್ತಿದ್ದೇನೆ. ಈ ಧ್ವನಿಯು ಭೂಮಿ ಮತ್ತು ಆಕಾಶದ ಅಲ್ಲಾಹನ ಧ್ವನಿ ಆಗಿದೆ. ಈ ಉದ್ದೇಶವು ಭೂಮ್ಯಾಕಾಶದ ಅಲ್ಲಾಹನ ಉದ್ದೇಶವಾಗಿದೆ. ಈ ಸತ್ಯವು ಎಂದೂ ಒಪ್ಪುವುದಿಲ್ಲ, ಎಂದೂ ತಪ್ಪವುದಿಲ್ಲ. ಇಸ್ಲಾಮ್ ಧರ್ಮವು ಲೋಕದಾದ್ಯಂತ ವಿಜಯಶಾಲಿ ಆಗುವುದು. ಇನ್‌ಶಾಅಲ್ಲಾಹ್. "ಮಸೀಹಿಯ್ಯತ್ ಲೋಕದಿಂದ ಕುಸಿತು ಹೋಗುವುದು. ಈಗ ಈಸಾಯಿಗಳ ಬಳಿ ನನ್ನ ದಾಳಿಗಳಿಗೆ ಉತ್ತರಿಸಲು ಯಾವ ಬೆಂಬಲವು ಇಲ್ಲ. ಅಲ್ಲಾಹನು ನನ್ನ ಕೈ ಯಿಂದ ಸೋಲಿಸುವನು. ನನ್ನ ಜೀವನದಲ್ಲಿಯೇ ಅಥವಾ ನನ್ನ ಜೀವಾವಧಿಯಲ್ಲಿ ಅವರಿಗೆ ಪುನಃ ತಲೆ ಎತ್ತ ಬಾರದ ಹಾಗೆ ತುಳಿದು ಹಾಕುವನು. ಅಥವಾ ನಾನು ನೆಟ್ಟಿರುವ ಬೀಜದಿಂದ ಒಂದು ಮರ ಹುಟ್ಟುವುದು ಅದರ ಮುಂದೆ ಕ್ರೈಸ್ತ ಮತವು ಒಂದು ಒಣ ಹೋಗಿರುವ ಗಿಡದ ಹಾಗೆ ಬಡಿ ಹೋಗುವುದು. ಲೋಕದಲ್ಲಿ ಎಲ್ಲಾ ದಿಕ್ಕಿನಲ್ಲಿಯು ಇಸ್ಲಾಮ್, ಅಹ್ಮದಿಯತ್‌ನ ಪತಾಕೆಯು ಹಾರುವುದು ಕಾಣಿಸುವುದು." ಹಝ್ರತ್ ಮುಸ್ಲಿಹ್ ಮೌಊದ್[ರ] ಪುನಃ ಹೇಳುತ್ತಾರೆ: ಮುಸ್ಲಿಹ್ ಮೌಊದ್‌ಗೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರಕಟಿಸಿದ ಭವಿಷ್ಯವಾಣಿ ಈಡೇರಿದ ಬಗ್ಗೆ ನಿಮಗೆ ನಾನು ಶುಭವಾರ್ತೆ ನೀಡುತ್ತಿರುವಾಗ ನಿಮ್ಮ ಹೊಣೆಗಾರಿಕೆಗಳ ಬಗ್ಗೆ ಸಹ ನಾನು ನಿಮ್ಮ ಗಮನವನ್ನು ಹರಿಸುತ್ತೇನೆ. ನಿಮ್ಮ ಪ್ರಥಮ ಕಡ್ಡಾಯ ಕರ್ತವ್ಯ ನೀವು ನಿಮ್ಮೊಳಗೆ ಉತ್ತಮ ಬದಲಾವಣೆ ಉಂಟುಮಾಡಬೇಕೆಂಬುದಾಗಿದೆ. ನೀವು ಇಸ್ಲಾಮ್ ಮತ್ತು ಅಹ್ಮದಿಯ್ಯತ್ತಿನ ಜಯ ಮತ್ತು ಯಶಸ್ಸಿಗೋಸ್ಕರ ನಿಮ್ಮ ರಕ್ತದ ಕೊನೆಯ ಹನಿಯ ತನಕ ಹರಿಸಿ ಬಿಡಲು ಸಿದ್ಧರಾಗಬೇಕು. ನಿಸ್ಸಂಶಯವಾಗಿಯೂ ನೀವು ಈ ಭವಿಷ್ಯವಾಣಿಯನ್ನು ಅಲ್ಲಾಹನು ಈಡೇರಿಸಿದ ಬಗ್ಗೆ ಸಂತೋಷ ಪ್ರಕಟಿಸಿರಿ. ಆದರೆ ನಾನು ಹೇಳುತ್ತೇನೆ, ನೀವು ನಿಮ್ಮ ಸಂತೋಷದಲ್ಲಿ ನಿಮ್ಮ ಹೊಣೆಗಾರಿಕೆಗಳನ್ನು ಮರೆಯಬೇಡಿರಿ. ಅಲ್ಲಾಹನು ನನಗೆ ಸ್ವಪ್ನದಲ್ಲಿ ತೋರಿಸಿದ್ದಾನೆ ಭೂಮಿ ನನ್ನ ಪಾದಗಳ ಕೆಳಗೆ ಕುಗ್ಗಿ ಹೋಗುತ್ತಾ ಇದೆ. ಅಲ್ಲಾಹನು ಇಲ್‌ಹಾಮ್ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನನ್ನ ಬಗ್ಗೆ ತಿಳಿಸಿದ್ದನು. ನಾನು ಬೇಗ ಬೇಗನೆ ಬೆಳೆಯುವೆನು ಎಂದು. ಆದುದರಿಂದ ನನ್ನ ಬಗ್ಗೆ ಹೀಗೆ ವಿಧಿಸಲ್ಪಟ್ಟಿದೆ. ನಾನು ವೇಗವಾಗಿ ನನ್ನ ಪಾದಗಳನ್ನು ಅಭಿವೃದ್ಧಿಯ ಕ್ಷೇತ್ರದಲ್ಲಿ ಮುಂದೆ ಸಾಗಿಸುತ್ತಾ ಇರುವೆನು. ಅದರೊಂದಿಗೆ ನಿಮ್ಮ ಕರ್ತವ್ಯವೇನೆಂದರೆ ನೀವು ನಿಮ್ಮ ಹೆಜ್ಜೆಗಳನ್ನು ವೇಗವಾಗಿ ಸಾಗುವಂತೆ ಮಾಡಿರಿ. ನೀವು ನಿಮ್ಮ ಉದಾಸೀನತೆಯನ್ನು ತ್ಯಜಿಸಿರಿ. ನೀವು ಅಭಿವೃದ್ಧಿ ಹೊಂದಲು ಇಚ್ಛಿಸುವಿರಾದರೆ ನಿಮ್ಮ ಹೊಣೆಗಾರಿಕೆಗಳನ್ನು ಸರಿಯಾದ ರೀತಿಯಲ್ಲಿ ಮನವರಿಕೆ ಮಾಡಿಕೊಂಡಿದ್ದರೆ ನನ್ನ ಹೆಜ್ಜೆಯೊಂದಿಗೆ ಹೆಜ್ಜೆ ಹಾಕಿ, ಭುಜಕ್ಕೆ ಭುಜ ತಗಲಿಸಿ ನನ್ನೊಂದಿಗೆ ಮುಂದೆ ಸಾಗುತ್ತಾ ಇರಬೇಕು. ನಾವು ಕುಫ್ರ್ ಭರಿತ ಹೃದಯದಲ್ಲಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯನ್ನು ನಾಟುವವರಾಗೋಣ. ನಾವು ಮಿಥ್ಯವನ್ನು ವಿಶ್ವದಿಂದ ಅಳಿಸಿ ಬಿಡೋಣ. ಇನ್‌ಶಾಅಲ್ಲಾಹ್ ಹೀಗೆಯೇ ಆಗುವುದು. ಭೂಮ್ಯಾಕಾಶಗಳು ಬದಲಾವಣೆ ಹೊಂದಬಹುದು ಆದರೆ ಅಲ್ಲಾಹನ ವಚನಗಳು ಎಂದೂ ಬದಲಾವಣೆ ಹೊಂದಲಾರವು. (ಅಲ್‌ಮೌಊದ್, ಅನ್ವಾರುಲ್ ಉಲೂಮ್ ಸಂಪುಟ–17, ಪುಟ–645–649)

ಆದುದರಿಂದ ನಾವು ನಮ್ಮ ಹೊಣೆಯರಿತು ಕೆಲಸ ಮಾಡುವವರಾಗಲು ಅಲ್ಲಾಹನು ನಮಗೆ ಭಾಗ್ಯ ದಯಪಾಲಿಸಲಿ. ನಾವು ಕೇವಲ ಮುಸ್ಲಿಹ್ ಮೌಊದ್ ದಿನಾಚರಣೆಯ ಜಲ್ಸ ಮಾಡುವವರಾಗಬಾರದು. ಇಸ್ಲಾಮಿನ ಸಂದೇಶವನ್ನು ಲೋಕದಾದ್ಯಂತ ಹರಡುವವರಾಗಬೇಕು. ನಾವು ಜಲ್ಸ ಮಾಡಿದ ಬಗ್ಗೆ ಸಂತೋಷಗೊಂಡರೆ ಸಾಕಾಗಲಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಯಾವ ಉದ್ದೇಶಕ್ಕೋಸ್ಕರ ಅಲ್ಲಾಹನು ಕಳುಹಿಸಿದ್ದನೋ ಆ ಉದ್ದೇಶ ಲಕ್ಷ್ಯವನ್ನು ಈಡೇರಿಸುವ ಕೆಲಸವನ್ನು ಮುಂದುವರಿಸುವವರು ನಾವಾಗಬೇಕು. ಅದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಸಂಖ್ಯಾತ ಭವಿಷ್ಯವಾಣಿಗಳನ್ನು ಪ್ರಕಟಿಸಿದ್ದಾರೆ. ಮುಸ್ಲಿಹ್ ಮೌಊದ್ ಬಗ್ಗೆ ಇರುವ ಭವಿಷ್ಯವಾಣಿ ಆ ಭವಿಷ್ಯವಾಣಿಗಳಲ್ಲಿ ಒಂದಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಮಾಡಿದ ಕೃತ್ಯಗಳಿಗೆ ಸಂಬಂಧಿಸಿ – ಕೇವಲ ಒಂದು ವಿಷಯಕ್ಕೆ ಸಂಬಂಧಿಸಿ ಮಾತ್ರ – ವಿವರಿಸುತ್ತೇನೆ. ಭವಿಷ್ಯವಾಣಿಯಲ್ಲಿ ಹೀಗೆ ಹೇಳಲಾಗಿತ್ತು: ಬಾಹ್ಯ ಮತ್ತು ಆಧ್ಯಾತ್ಮಿಕ ಜ್ಞಾನದಿಂದ ಮುಸ್ಲಿಹ್ ಮೌಊದ್ ತುಂಬಿಸಲ್ಪಡುವವರು ಎಂದು. ಇದಕ್ಕೆ ಸಂಬಂಧಿಸಿ ಒಂದು ಮಿಂಚುನೋಟ ನಿಮ್ಮ ಮುಂದೆ ಇರಿಸುತ್ತೇನೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಪುಸ್ತಕಗಳು, ಭಾಷಣಗಳು, ಅನ್‌ವಾರುಲ್ ಉಲೂಮ್ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗುತ್ತಿವೆ. ಈಗಾಗಲೇ 26 ಸಂಪುಟಗಳು ಪ್ರಕಟವಾಗಿವೆ. ಈ 26 ಸಂಪುಟಗಳಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ 670 ಪುಸ್ತಕಗಳು ಮತ್ತು ಭಾಷಣಗಳು ಸೇರಿವೆ. ಖುತ್‌ಬಾತೆ ಮಹ್ಮೂದ್ ಎಂಬ ಶೀರ್ಷಿಕೆಯಲ್ಲಿ 39 ಸಂಪುಟಗಳು ಪ್ರಕಟವಾಗಿವೆ. ಅವುಗಳಲ್ಲಿ 1959ರ ತನಕದ ಖುತ್‌ಬಗಳು ಪ್ರಕಟವಾಗಿವೆ. ಈ ಸಂಪುಟಗಳಲ್ಲಿ ಪ್ರಕಟವಾದ ಖುತ್‌ಬಗಳ ಸಂಖ್ಯೆ 2367. ತಫ್‌ಸೀರ್ ಸಗೀರ್ 1071 ಪುಟಗಳನ್ನು ಹೊಂದಿದೆ. ಪವಿತ್ರ ಖುರ್‌ಆನಿನ 59 ಅಧ್ಯಾಯಗಳ ವ್ಯಾಖ್ಯಾನ ತಫ್‌ಸೀರ್ ಕಬೀರ್

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 26 March 2020 Issue No. 11

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

ಎಂಬ ಶೀರ್ಷಿಕೆಯಲ್ಲಿ ಹತ್ತು ಸಂಪುಟಗಳಲ್ಲಿ ಪ್ರಕಟವಾಗಿವೆ. ಅವುಗಳ ಪುಟಗಳ ಒಟ್ಟು ಸಂಖ್ಯೆ 5907 ಆಗಿವೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಮುದ್ರಿಸದೆ ಉಳಿದಿದ್ದ ತಫ್‌ಸೀರ್, ದರ್‌ಸುಲ್ ಖುರ್‌ಆನ್ ರೀಸರ್ಚ್ ಸೆಲ್‌ನವರು ಸಂಗ್ರಹಿಸಿ ಕಂಪೋಸ್ ಮಾಡಿ ಫಝ್ಲ್ ಉಮರ್ ಫೌಂಡೇಶನಗೆ ನೀಡಿದ್ದಾರೆ. ಅವುಗಳ ಪುಟಗಳ ಸಂಖ್ಯೆ 3094 ಆಗಿವೆ. ಅನಂತರ ನಾನು ರೀಸರ್ಚ್ ಸೆಲ್‌ನವರೊಂದಿಗೆ ಹೇಳಿದೆ, ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಬರಹಗಳಿಂದ ಮತ್ತು ಭಾಷಣಗಳಿಂದ ತಫ್‌ಸೀರ್ ಖುರ್‌ಆನ್ ಭಾಗಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಬೇಕೆಂದು. ಈ ಕೆಲಸ ಪ್ರಾರಂಭವಾಗಿದೆ. ಇಂದಿನ ತನಕ 9000 ಪುಟಗಳಷ್ಟು ತಫ್‌ಸೀರ್ ಸಂಗ್ರಹಿಸಲಾಗಿದೆ. ಈ ಕೆಲಸ ಮುಂದುವರಿಯುತ್ತಾ ಇದೆ.

ಇವು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಕೆಲಸದ ಒಂದು ಸಂಕ್ಷಿಪ್ತ ವಿವರಣೆಯಾಗಿದೆ. ಆದರೆ ಈ ವಿವರಣೆಯ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಅವರು ತಮ್ಮ ಖಿಲಾಫತ್ ಕಾಲಾವಧಿಯಲ್ಲಿ ಒಮ್ಮೆ ತಮ್ಮ ಒಂದು ಖುತ್‌ಬದಲ್ಲಿ ಇದರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಅವರ ಒಂದು ಉಲ್ಲೇಖವನ್ನು ಇಲ್ಲಿ ನಾನು ಪ್ರಸ್ತಾಪಿಸುವೆನು: ಅವರು ಹೇಳುತ್ತಾರೆ:

ಅಲ್ಲಾಹನು ಹಝ್ರತ್ ಮುಸ್ಲಿಹ್ ಮೌಊದ್(ರ) ವರ ಬಗ್ಗೆ ಹೇಳಿದನು "ಅವನು ಲೌಕಿಕ ಹಾಗೂ ಆಂತರಿಕ ಜ್ಞಾನದಿಂದ ಪರಿಪೂರ್ಣನಾಗಿರುವನು" ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಅದರ ಬಗ್ಗೆ ಹೇಳುತ್ತಾರೆ ನಾನು ಅನೇಕ ವಿವರಗಳನ್ನು ಒಗ್ಗೂಡಿಸಿದ್ದೆ ಆದರೆ ಈ ಸಂದರ್ಭದಲ್ಲಿ ನಾನು ಕೇವಲ ನನ್ನ ಈ ಉದ್ದೇಶಕ್ಕಾಗಿ ತಯಾರಿಸಿದ ಆ ನಖ್‌ಶೆಯನ್ನು ಮಾತ್ರ ವಿವರಿಸುವೆನು. ಅದು ಹೀಗಿದೆ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಒಂದು ತಫ್‌ಸೀರ್ (ಪವಿತ್ರ ಖುರ್‌ಆನಿನ ವ್ಯಾಖ್ಯಾನ) ತಫ್‌ಸೀರೆ ಕಬೀರ್ ಆಗಿದೆ. ಅದು ಎಂತಹ ಅದ್ಭುತವಾದ ವ್ಯಾಖ್ಯಾನವಾಗಿದೆ ಎಂದರೆ ಯಾರಾದರು ಇದರ ಯಾವುದಾದರು ಒಂದು ಭಾಗವನ್ನಾದರು ಗಮನವಿಟ್ಟು ಓದಿದರೆ ಅವನು ಈ ಮಾತು ಓಪ್ಪಲೇ ಬೇಕಾಗುತ್ತದೆ ಅಂದರೆ ಒಂದು ವೇಳೆ ಲೋಕದಲ್ಲಿ ಓರ್ವ ದೈವಭಕ್ತನು ಜನಿಸಿದರೆ ಅವನು ಸಹ ಪವಿತ್ರ ಖುರ್‌ಆನಿನ ಈ ವ್ಯಾಖ್ಯಾನದ ಟಿಪ್ಪಣಿಗಳನ್ನು ಮುದ್ರಣಗೊಳಿಸಿದ್ದರೆ ಸಾಕು. ಇದು ಅವನಿಗೆ ಲೋಕದ ದೃಷ್ಟಿಯಲ್ಲಿ ಮಹಾನ್ ವ್ಯಕ್ತಿಯಾಗಲು ಸಾಕಾಗುತ್ತಿತ್ತು. ಆದರೆ ಇದು ಸಾಲದು. ಪವಿತ್ರ ಖುರ್‌ಆನಿನ ಆಧಾರದ ಮೇಲು ಇನ್ನೂ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ ನನ್ನ ಪ್ರಕಾರ ಹುಝೂರ್ ಅವರು ಪವಿತ್ರ ಖುರ್‌ಆನಿನ ಮೇಲೆ ಎಂಟು ಹತ್ತು ಸಾವಿರ ಪುಟಗಳು ಬರೆದಿರಬಹುದು. ತಫ್‌ಸೀರೆ ಕಬೀರಿನ 11 ಸಂಪುಟಗಳು ಅದರಲ್ಲಿ ಸೇರಿವೆ. ಭಾಷಣಕಲೆಯ(ಇಲ್ಮೆ ಕಲಾಮ್) ಮೇಲೆ ಹುಝೂರ್ ಅವರು 10 ಪುಸ್ತಕಗಳನ್ನು ರಚಿಸಿದ್ದಾರೆ. ಆಧ್ಯಾತ್ಮಿಕತೆ, ಇಸ್ಲಾಮಿನ ನೈತಿಕತೆ ಮತ್ತು ಇಸ್ಲಾಮಿ ನಂಬಿಕೆಗಳ ಮೇಲೆ 31 ಪುಸ್ತಕಗಳನ್ನು ರಚಿಸಿದ್ದಾರೆ. ಜೀವನ ಚರಿತ್ರೆಗಳ ಬಗ್ಗೆ 13 ಪುಸ್ತಕಗಳನ್ನು ರಚಿಸಿದ್ದಾರೆ. ಇತಿಹಾಸದ ಮೇಲೆ 4 ಪುಸ್ತಕಗಳನ್ನು ರಚಿಸಿದ್ದಾರೆ. ಫಿಖಹ್ (ಧರ್ಮಶಾಸ್ತ್ರ)ದ ಮೇಲೆ 3 ಪುಸ್ತಕಗಳನ್ನು ರಚಿಸಿದ್ದಾರೆ. ಹಿಂದುಸ್ತಾನದ ವಿಭಜನೆಯ ಮುಂಚೆಯ ರಾಜಕೀಯದ ಬಗ್ಗೆ 25 ಪುಸ್ತಕಗಳನ್ನು ರಚಿಸಿದ್ದಾರೆ. ಹಿಂದುಸ್ತಾನ ವಿಭಜನೆಯ ನಂತರ ರಾಜಕೀಯದ ಬಗ್ಗೆ ಮತ್ತು ಪಾಕಿಸ್ತಾನದ ಸ್ಥಾಪನೆಯ ಬಗ್ಗೆ 9 ಪುಸ್ತಕಗಳನ್ನು ರಚಿಸಿದ್ದಾರೆ. ಕಾಶ್ಮೀರದ ರಾಜಕೀಯದ ಬಗ್ಗೆ 15 ಪುಸ್ತಕಗಳನ್ನು ರಚಿಸಿದ್ದಾರೆ. ಅಹ್ಮದಿಯ ಸಂಘಟನೆಯ ವಿಶೇಶ ಸಮಸ್ಯೆಗಳು ಹಾಗೂ ಯೋಜನೆಗಳ ಬಗ್ಗೆ 99 ಪುಸ್ತಕಗಳನ್ನು ರಚಿಸಿದರು. ಈ ಎಲ್ಲಾ ಪುಸ್ತಕಗಳ ಒಟ್ಟು ಸಂಖ್ಯೆ 225 ಆಗುತ್ತದೆ. ಆ ಕಾಲದಲ್ಲಿ ಹುಝುರ್(ರ) ಅವರಿಗೆ ಸಂಪೂರ್ಣ ಮಹಿತಿ ನೀಡಲಿಲ್ಲ ಎನ್ನಿಸುತ್ತದೆ ಆದರೆ ಈಗ ಸಂಪೂರ್ಣ ಮಾಹಿತಿ ದೊರಕಿದೆ. ಏನೇ ಇರಲಿ ಹುಝೂರ್(ರ) ಹೇಳುತ್ತಾರೆ ಭವಿಷ್ಯವಾಣಿಯಲ್ಲಿ ಲೌಕಿಕ ಹಾಗೂ ಆಂತರಿಕ ಜ್ಞಾನದಿಂದ ಪರಿಪೂರ್ಣನಾಗಿರುವನು ಎಂದು ಹೇಳಲಾಗಿತ್ತು ಅವರ ಮೇಲೆ ದೃಷ್ಟಿ ಹಾರಿಸಿ ನೋಡಿದರೆ ನಮಗೆ ತಿಳಿದು ಬರುತ್ತದೆ ಅವರಿಗೆ ಲೌಕಿಕ ಜ್ಞಾನವು ನೀಡಲಾಗಿತ್ತು ಅದರೊಂದಿಗೆ ಆಂತರಿಕ ಜ್ಞಾನವೂ ಸಹ ನೀಡಲಾಗಿತ್ತು ಎಂದು. ಕುತೂಹಲದ ವಿಷಯವೇನೆಂದರೆ ಹಝ್ರತ್ ಮುಸ್ಲಿಹ್ ಮೌಊದ್(ರ) ಯಾವುದಾದರೂ ಪುಸ್ತಕವನ್ನು ರಚಿಸಿದರೆ ಎಲ್ಲರು ಇದಕ್ಕಿಂತ ಉತ್ತಮ ಪುಸ್ತಕ ಯಾವುದೂ ಇಲ್ಲ ಎಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸುತ್ತಿದ್ದರು. ಅದೇ ರೀತಿ ನಿಮಗೆ ರಾಜಕೀಯವಾಗಿ ಸಲಹೆ ನೀಡಿದಾಗ ವಿರೋಧಿಗಳು ಸಹ ನಿಮ್ಮ ಅರ್ಹತೆಯನ್ನು ಶ್ಲಾಘಿಸಿದ್ದಾರೆ. ಇದು ಹುಝೂರ್ ಅವರ ಲೌಕಿಕ ಹಾಗೂ ಆಂತರಿಕ ಜ್ಞಾನದ ಬಗ್ಗೆ ವಿವರವಿದೆ. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಹೇಳುತ್ತಾರೆ ಅದರ ಸಾವಿರ ಪಾಲಿನಲ್ಲಿ ಒಂದು ಪಾಲಷ್ಟು ನಾನು ಪಡೆಯಲಾರೆನು. ಇದು ಕೇವಲ ಒಂದು ಮಿಂಚು ನೋಟವಾಗಿದೆ. ಇಲ್ಲಿಗೆ ನಾನು ಮುಗಿಸುವೆನು. (ಮಾಹ್‌ನಾಮ ಅನ್ಸಾರುಲ್ಲ, ಹಝ್ರತ್ ಮುಸ್ಲಿಹ್ ಮೌಊದ್ ಸಂಚಿಕೆ, ಮೇ–ಜೂನ್–ಜುಲೈ 2009, ಪುಟ–64–65)

ಅಲ್ಲಾಹನ ಸಾವಿರಗಟ್ಟಲೆ ಅನುಗ್ರಹಗಳು ಅವರ ಮೇಲೆ ಸುರಿಸಲ್ಪಡಲಿ. ಅಲ್ಲಾಹನು ಪ್ರತಿಕ್ಷಣದಲ್ಲೂ ಅವರ ಪದವಿಯನ್ನು ಉನ್ನತಗೊಳಿಸುತ್ತಾ ಇರಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಪುತ್ರನ ಹಾಗೆಯೇ ಇಸ್ಲಾಮನ್ನು ಪ್ರಚಾರ ಮಾಡುವ ನೋವನ್ನು ನಾವು ಸಹ ನಮ್ಮ ಹೃದಯಗಳಲ್ಲಿ ಸೃಷ್ಟಿಸುವವರಾಗಬೇಕು. ಇಸ್ಲಾಮಿಗೆ ಸೇವೆ ಸಲ್ಲಿಸಲು ನಾವು ಪ್ರತಿ ಸಮಯದಲ್ಲಿ ಸಿದ್ಧರಾಗಿರಬೇಕು. ನಾವು ಧರ್ಮಕ್ಕೋಸ್ಕರ ಸೇವೆ ಮಾಡುವವರೊಂದಿಗೆ ಸೇರುವವರಾಗೋಣ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳಿದ ಹಾಗೆ **"ಈ ಜಮಾಅತ್ ನಿಮ್ಮ ಕಾಲದಲ್ಲಿ ಅಪಕೀರ್ತಿಗೆ ಪಾತ್ರವಾಗದಿರಲಿ."** (ಕಲಾಮೆ ಮಹ್ಮೂದ್ ಪುಟ–97) ನಾವು ಈ ಜಮಾಅತನ್ನು ಅಪಕೀರ್ತಿಗೆ ಪಾತ್ರವಾಗುವಂತೆ ಮಾಡುವವರಾಗಬಾರದು. ನಾವು ಜಮಾಅತಿಗೆ ಸೇವೆ ಸಲ್ಲಿಸುತ್ತಾ ಮುಂದೆ ಸಾಗುವವರಾಗಬೇಕು.

ನಮಾಝ್‌ಗಳ ನಂತರ ಎರಡು ಜನಾಝಗಳ ನಮಾಝ್ ನಿರ್ವಹಿಸುವೆನು. ಮೊದಲನೆಯ ಜನಾಝ ಮುಹ್ತರಮ ಮರ್‌ಯಮ್ ಎಲಿಝಬೆತ್ ಸಾಹಿಬ ಅವರದು. ಅವರು ಮುಲ್ತಾನಿನ ಮಾಜಿ ಅಮೀರ್ ಮುಕರ್ರಮ್ ಮುಹ್ತರಮ್ ಮಲಿಕ್ ಉಮರ್ ಅಲಿ ಖೋಖರ್‌ರವರ ದ್ವಿತೀಯ ಪತ್ನಿಯಾಗಿದ್ದರು. 86ನೇ ವಯಸ್ಸಿನಲ್ಲಿ ಒಂದು ಅಪಘಾತಕ್ಕೆ ಗುರಿಯಾಗಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರ ಪುತ್ರಿಯು ಸಹ ಲಿಫ್ಟ್‌ನಲ್ಲಿದ್ದರು. ಅಲ್ಲಿ ಒಂದು ಅಪಘಾತ ಸಂಭವಿಸಿತು ಅದರಲ್ಲಿ ಅವರಿಗೂ ಸಹ ಕೆಲವು ಗಾಯಗಳಾಗಿವೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರ ಜರ್ಮನಿಯುವರಾಗಿದ್ದರು ಹೆಂಬರ್ಗ್‌ನಲ್ಲಿ ವಾಸವಾಗಿದ್ದರು. 1934ರಲ್ಲಿ ಅವರು ಹುಟ್ಟಿದರು. 1952ರಲ್ಲಿ ಅವರು ಬೈಅತ್ ಮಾಡಿ ಜಮಾಅತ್ತಿನಲ್ಲಿ ಸೇರ್ಪಡೆ ಆಗಿದ್ದರು. ಮಲಿಕ್ ಉಮರ್ ಖೋಕರ್ ಸಾಹೆಬ್ ಅವರೊಂದಿಗೆ ವಿವಾಹವಾಯಿತು. ಅನಂತರ ಅವರು ಪಾಕಿಸ್ತಾನಕ್ಕೆ ತೆರಳಿದರು. ಅವರ ನಿಧನದ ನಂತರ ಅವರು ಜಮರ್ನಿಗೆ ಹಿಂದಿರುಗಿದರು. ಪುನಃ ಪಾಕಿಸ್ತಾನಕ್ಕೆ ತೆರಳಿದ್ದರು. ಇವರು ಮೂಸಿ ಆಗಿದ್ದರು. ನಮಾಝ್ ಹಾಗೂ ಉಪವಾಸಗಳನ್ನು ಕಡ್ಡಾಯವಾಗಿ ನಿರ್ವಹಿಸುತ್ತಿದ್ದರು. ಸಮಯಕ್ಕೆ ಸರಿಯಾಗಿ ನಮಾಝ್ ನಿರ್ವಹಿಸುತ್ತಿದ್ದರು. ಪವಿತ್ರ ಖುರ್‌ಆನನ್ನು ಪಠಿಸುತ್ತಿದ್ದರು. ಅವರು ಮಕ್ಕಳು ಹೇಳುತ್ತಾರೆ ನಮ್ಮ ತಂದೆಯೊಂದಿಗೆ ಅವರ ವಿವಾಹ 1952ರಲ್ಲಾಯಿತು. ಆಗ ಜರ್ಮನಿಯಲ್ಲಿ ಮುಕರ್ರಮ್ ಅಬ್ದುಲ್ ಲತೀಫ್ ಸಾಹೆಬ್ ಮುರಬ್ಬಿ ಆಗಿದ್ದರು. ಅವರು ಬೈಅತ್ ಮಾಡಿಸಿ ಅವರ ನಿಕಾಹ್ ಪಠಿಸಿದರು. ವಿವಾಹದ ನಂತರ ಪಾಕಿಸ್ತಾನಕ್ಕೆ ತೆರಳಿದರು. ಅವರ ಮಕ್ಕಳು ಹೇಳುತ್ತಾರೆ: ನಮ್ಮ ತಾಯಿ ಸಯ್ಯಿದಹ್ ಬೇಗಮ್ ಸಾಹೆಬ ಅವರು ಮಲಕ್ ಉಮರ್ ಅಇ ಸಾಹೆಬ್ ಅವರ ಮೊದಲ ಧರ್ಮ ಪತ್ನಿ ಆಗಿದ್ದರು. ಅವರು ಮೀರ್ ಮುಹಮ್ಮದ್ ಇಸ್‌ಹಾಖ್ ಸಾಹೆಬ್ ಅವರ ಪುತ್ರಿ ಆಗಿದ್ದರು. ಅವರೊಂದಿಗೆ ಇರಲು ಪ್ರಾರಂಭಿಸಿದರು, ಮಲಕ್ ಸಾಹೆಬ್ ಅವರ ಹಿರಿಯ

*(ಉಳಿದ ವರದಿ ಪುಟ ಸಂಖೆ 01 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.